ಸೋಮಶೇಖರ ಸಾಲಿ


Somashekhar Sali



ಕರ್ನಾಟಕ ಲಲಿತಕಲಾ ಅಕಾಡೆಮಿ

Karnataka Lalithakala Academy

೧೯೪೧ರಲ್ಲಿ ಜನಿಸಿದ ಡಾ|| ಬಿ.ಕೆ. ಹಿರೇಮಠರು ಬಹುಮುಖ ಪ್ರತಿಭಾವಂತರು. ೧೯೪೬ರಲ್ಲಿ ಬಿ.ಎ. ಪದವಿ ಗಳಿಸಿದ ಹಿರೇಮಠರು, ೧೯೬೬ರಲ್ಲಿ ಎಂ.ಎ. ಪದವಿಯನ್ನು ಪ್ರಥಮ ವರ್ಗದಲ್ಲಿ ಪಾಸು ಮಾಡಿ, ಅದಕ್ಕಾಗಿ ಸುವರ್ಣ ಪದಕವನ್ನು ಪಡೆದರು. 'ಕನ್ನಡ ಹಸ್ತ ಪ್ರತಿಗಳು - ಒಂದು ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ, ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೮೮ರಲ್ಲಿ ಪಿ.ಎಚ್.ಡಿ. ಪದವಿಯನ್ನು ಡಾ|| ಹಿರೇಮಠರು ಪಡೆದರು. ಶಾಸನ ಶಾಸ್ತ್ರದಲ್ಲಿ ಡಿಪ್ಲೊಮಾವನ್ನು ೧೯೬೦ರಲ್ಲಿ ಪ್ರಥಮ ವರ್ಗದಲ್ಲಿ ಗಳಿಸಿದರು. ಕನ್ನಡ ಸಾಹಿತ್ಯ ಮತ್ತು ಶಾಸನ ಶಾಸ್ತ್ರಗಳಲ್ಲಿ ಉನ್ನತ ಪದವಿಗಳನ್ನು ಪಡೆದ ಡಾ|| ಹಿರೇಮಠರು ಕಲೆಯನ್ನೂ ಶಾಸ್ತ್ರೋಕ್ತವಾಗಿ ಅಧ್ಯಯನ ಮಾಡಿದ್ದಾರೆ. ೧೯೬೬ರಲ್ಲಿ ಜಿ.ಡಿ. (ಮಾಡೆಲ್ಲಿಂಗ್), ೧೯೬೦ರಲ್ಲಿ ಜಿ.ಡಿ. (ಆರ್ಟ್) ಪದವಿಗಳನ್ನು ಗಳಿಸಿದ ಹಿರೇಮಠರು, ೧೯೬೮ರಲ್ಲಿ ಎಂ.ಎಂ. ಪದವಿಯನ್ನು ಗಳಿಸಿದರು. ಈ ಎಲ್ಲಾ ಕಲಾ ಪರೀಕ್ಷೆಗಳಲ್ಲಿ ಡಾ|| ಹಿರೇಮಠರು ಪ್ರಥಮ ವರ್ಗದಲ್ಲಿ ಪಾಸಾದುದಲ್ಲದೆ, ಇಡೀ ರಾಜ್ಯಕ್ಕೆ ಪ್ರಥಮರಾಗಿದ್ದರು. ೧೯೭೨ ಮತ್ತು ೧೯೭೩ರಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ಅನುಕ್ರಮವಾಗಿ ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ನಡೆಸಿದರು. ಕರ್ನಾಟಕ ಲಲಿತ ಕಲಾ ಅಕಾಡೆಮಿಯು, ೧೯೮೧ ಮತ್ತು ೧೯೮೬ರಲ್ಲಿ ಅನುಕ್ರಮವಾಗಿ ಧಾರವಾಡ ಮತ್ತು ಮಡಿಕೇರಿಯಲ್ಲಿ ನಡೆಸಿದ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದರು. ಇವರು ೧೯೯೧-೯೩ರಲ್ಲಿ ಲಲಿತ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.



ಡಾ|| ಬಿ.ಕೆ. ಹಿರೇಮಠ

'ಕಲಾಗುರು ದಂಡಾವತಿ ಮಠ', 'ಅಮೀನ ಸಾಬ ಕಮಡೊಳ್ಳಿ', 'ಬಾಗಲಕೋಟೆ ವೈರಾಗ್ಯದ ಮಲ್ಲಣಾರ್ಯರು', 'ಕನ್ನಡ ಹಸ್ತ ಪ್ರತಿಗಳು - ಒಂದು ಅಧ್ಯಯನ', 'ಈಶ್ವರ ಸಣಕಲ್ಲ' - ಇವರ ಪ್ರಕಟಿತ ಸ್ವತಂತ್ರ ಕೃತಿಗಳು. 'ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ' ಎಂಬುದು ಇವರು ಸಂಪಾದಿಸಿದ ಕೃತಿ.

ಸೋಮಶೇಖರ ಸಾಲಿ

Somashekhar Sali

ಡಾ॥ ಬಿ.ಕೆ. ಹಿರೇಮಠ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - 560 001

Karnataka Lalithakala Academy
Nrupathunga Road, Bangalore - 560 001

SOMASHEKHARA SALI : A Biography by **Dr. B.K.Hiremath**
Published by **H. Shankarappa**, Registrar, Karnataka Lalithakala Academy, Nrupathunga Road, Bangalore-560 001.

Pages : vi + 46
ಮೊದಲ ಮುದ್ರಣ : ೧೯೯೯
ಪ್ರತಿಗಳು : ೧೦೦೦
ಬೆಲೆ ರೂ. : ೨೫/-

ಪ್ರಧಾನ ಸಂಪಾದಕರು :
ಪ್ರೊ. ಅಂದಾನಿ ವಿ.ಜಿ.
ಸಂಪಾದಕರ ಮಂಡಳಿ :
ಡಾ. ಹೆಚ್. ಚಂದ್ರಶೇಖರ
ಶ್ರೀಮತಿ ರಜನಿ ಪ್ರಸನ್ನ
ಶ್ರೀ ಕೆ. ಎಸ್. ವಿಶ್ವಂಭರ
ಶ್ರೀ ಮಧು ದೇಸಾಯಿ
ಶ್ರೀ ಬಸವರಾಜ ಮುಸಾವಳಗಿ
ಪ್ರಕಾಶಕರು :
ಎಚ್. ಶಂಕರಪ್ಪ
ರಿಜಿಸ್ಟ್ರಾರ್

ಭಾಷಾಂತರಕಾರರು :
ಪ್ರೊ. ಶ್ರೀಧರರಾವ್

ಮುದ್ರಕರು :
ದಿಕ್ಸೂಚಿ ಪ್ರೆಸ್,
ಬೆಂಗಳೂರು-೫೬೦ ೦೭೯.

ಅಧ್ಯಕ್ಷರ ನುಡಿ


ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಹತ್ವದ ಪ್ರಕಟಣೆಗಳ ಮಾಲಿಕೆಯಲ್ಲಿ ಕಲಾವಿದರ ಪರಿಚಯಾತ್ಮಕ ಕಿರು ಹೊತ್ತಿಗೆಗಳೂ ಸೇರಿವೆ. ಈ ಕಿರು ಹೊತ್ತಿಗೆಗಳು ಗಾತ್ರದಲ್ಲಿ ಚಿಕ್ಕವುಗಳಾದರೂ, ಆಯಾ ಕಲಾವಿದರ ಜೀವನ, ಬೆಳವಣಿಗೆ ಮತ್ತು ಅವರ ಕಾಣಿಕೆಗಳನ್ನು ಓದುಗರಿಗೆ ಸೂಕ್ತ ರೀತಿಯಲ್ಲಿ ಪರಿಚಯಿಸಿ ಕೊಡುತ್ತವೆ.

ಮುಂಬೈ ಜಿ.ಜಿ. ಕಲಾಶಾಲೆಯ ಗುಂಪಿಗೆ ಸೇರಿರುವ ಸೋಮಶೇಖರ ಸಾಲಿಯವರು ಕಲಾವಿದರಾಗಿ ಮತ್ತು ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದರ ಮೂಲಕ ಕರ್ನಾಟಕ ಚಿತ್ರಕಲಾ ಕ್ಷೇತ್ರಕ್ಕೆ ಅಮೋಘ ಸೇವೆ ಸಲ್ಲಿಸಿರುತ್ತಾರೆ. ಇವರ ಪರಿಚಯವು ಕಲಾವಿದರಿಗೆ, ಕಲಾ ವಿದ್ಯಾರ್ಥಿಗಳಿಗೆ ಮತ್ತು ಕಲಾಭಿಮಾನಿಗಳಿಗೆ ಆಗಬೇಕೆಂಬುದು ಅಕಾಡೆಮಿಯ ಆಶಯವಾಗಿರುತ್ತದೆ.

ಅಕಾಡೆಮಿಯ ಕೋರಿಕೆಯನ್ನು ಮನ್ನಿಸಿ ಹೆಸರಾಂತ ಬರಹಗಾರ ಡಾ. ಬಿ.ಕೆ. ಹಿರೇಮಠ ಅವರು ಈ ಕಿರು ಹೊತ್ತಿಗೆ ಬರೆದು ಕೊಟ್ಟಿದ್ದಾರೆ, ಅಕಾಡೆಮಿಯ ಪರವಾಗಿ ಅವರಿಗೆ ವಂದನೆಗಳು. ಹಾಗೆಯೇ ಇಂಗ್ಲೀಷಿನಲ್ಲಿ ಇದನ್ನು ಸುಂದರವಾಗಿ ಭಾಷಾಂತರಿಸಿ ಕೊಟ್ಟ ಹಿರಿಯರಾದ ಪ್ರೊ. ಶ್ರೀಧರರಾವ್ ಅವರಿಗೆ ಧನ್ಯವಾದಗಳು.

ಈ ಪುಸ್ತಕದ ಸುಂದರ ವಿನ್ಯಾಸವನ್ನು ಯೋಚಿಸಿದ ಅಕಾಡೆಮಿಯ ಸದಸ್ಯರಾದ ಶ್ರೀ ಬಸವರಾಜು ಮುಸಾವಳಗಿ ಅವರಿಗೂ, ಕರಡನ್ನು ತಿದ್ದಿ ಮುದ್ರಣದ ಮೇಲ್ವಿಚಾರಣೆಯನ್ನು ನೋಡಿಕೊಂಡ ಅಕಾಡೆಮಿಯ ಇನ್ನೋರ್ವ ಸದಸ್ಯರಾದ ಡಾ॥ ಹೆಚ್. ಚಂದ್ರಶೇಖರ ಅವರಿಗೂ ಧನ್ಯವಾದಗಳು.

ಪ್ರೊ. ಅಂದಾನಿ ವಿ.ಜಿ.
ಅಧ್ಯಕ್ಷರು.



ನೀಳ ಹಾಗೂ ತೆಳುದೇಹ, ಸಡಿಲು ಸಡಿಲಾದ ಜುಬ್ಬ, ಹೆಗಲ ಮೇಲೊಂದು ಶಲ್ಲೆ, ಅದೇ ಆಗ ಮಡಿಕೆ ತೆಗೆದುಟ್ಟ ಬಿಳಿಯ ಧೋತ್ರ ಎಲ್ಲವೂ ಅಚ್ಚ ಖಾದಿ. ಇದಕ್ಕೆ ಕಳೆಗಟ್ಟುವಂತೆ ಅಷ್ಟೊಂದು ಬಿರುಸಿಲ್ಲದ ನಡಿಗೆ, ದಾರಿಯಲ್ಲಿ ಭೆಟ್ಟಿಯಾಗುವವರೊಡನೆ ಮೃದು ಮಾತುಗಳು, ಮುಗಿದ ಕೈ, ಮುಗುಳು ನಗೆ, ಈ ವ್ಯಕ್ತಿಯನ್ನು ನೋಡುವವರಿಗೆ ... ಇವರುಬಹುಶಃ ಪಳಗಿದ ರಾಜಕಾರಣಿ. ದೊಡ್ಡ ವ್ಯಾಪಾರಿ, ... ಸಾಮಾಜಿಕ ಕಾರ್ಯಕರ್ತ, ... ಧುರೀಣ .... ಸಾಹಿತಿ ..... ಸಂಗೀತಗಾರ .... ಚಿತ್ರಕಲಾವಿದ - ಹೀಗೆ ಹಲವು ಕಲ್ಪನೆ ಮೂಡಿಸಬಲ್ಲ ವ್ಯಕ್ತಿತ್ವ. ಅಪೂರ್ವವೆನ್ನಿಸಬಹುದಾದ ಈ ಅನೇಕತೆಗಳು ಒಂದೇ ವ್ಯಕ್ತಿಯಲ್ಲಂತೂ ಇರಲಾರವು. ಕಲ್ಪಿಸಿಕೊಳ್ಳಬಹುದಾದ ಈ ಬಹುಮುಖತೆಯಲ್ಲಿ ಯಾವುದಾದರೊಂದು ಮಾತ್ರ ನಿಜವಾದುದಿರಬೇಕು. ಉಳಿದವು ನೋಡುಗರ ಕಲ್ಪನೆಗಳೇ ಆಗಿರಬೇಕು ಎಂಬ ಭಾವನೆ ಮೂಡುವುದು ಸಹಜವಾಗಿದೆ. ಆದರೆ, ಈ ಎಲ್ಲ ಕ್ಷೇತ್ರಗಳಲ್ಲೂ, ಓಡಾಡಿದ,

ಅಪಾರ ಜೀವಾನುಭವ ಪಡೆದ, ಉರಿಬರಲಿ, ಸಿರಿಬರಲಿ ನಗುನಗುತ್ತಲೇ ಇರುವ ಸೋಮಶೇಖರ ಸಾಲಿಯವರನ್ನು ಹತ್ತಿರದಿಂದ ಕಂಡಾಗ ಇಂಥ ಕಲ್ಪನೆಗಳಿಗೆ ಅವಕಾಶವೇ ಉಳಿಯುವುದಿಲ್ಲ. ಅವರದು ಅನೇಕ ಮುಖದ ಅಪರೂಪದ ವ್ಯಕ್ತಿತ್ವ.

ಸೋಮಶೇಖರ ಸಾಲಿಯವರ ಇಂಥ ಅಪರೂಪದ ವ್ಯಕ್ತಿತ್ವಕ್ಕೆ ಅವರು ಹುಟ್ಟಿ ಬೆಳೆದು ಬಂದ ಸಮೃದ್ಧ ಪರಿಸರವೇ ಕಾರಣವಾಗಿದೆ. ಮೂಲತಃ ಸಾಲಿಮಠದವರಾಗಿದ್ದ ಈ ಮನೆತನದವರು ಒಂದು ಸಂದರ್ಭದಲ್ಲಿ ಜ್ಞಾನಬೋಧನೆ, ಜ್ಞಾನಪ್ರಸಾರದಲ್ಲಿ ಮಹತ್ವದ ಪಾತ್ರವಾಡಿದವರು. ಹಿಂದಿನಿಂದಲೂ ಪೋಷಿಸಿಕೊಂಡು ಬಂದ ನೈತಿಕ, ಧಾರ್ಮಿಕ ಪರಂಪರೆಗಳ ಜೊತೆಗೆ ಪ್ರಗತಿಶೀಲತೆಯಲ್ಲಿಯೂ ಆಸಕ್ತಿ ಹೊಂದಿದವರು. ಲೌಕಿಕ ಹಾಗೂ ಪಾರಮಾರ್ಥಿಕಗಳನ್ನು ಸಮನಾಗಿ ಸಾಧಿಸುತ್ತಾ ಬಂದವರು. ವ್ಯಾಪಾರೋದ್ಯಮದಲ್ಲಿ ತೊಡಗಿದ್ದರೂ, ಧರ್ಮ, ಕಲೆ, ಉದ್ಯಮಗಳ ತ್ರಿವೇಣಿ ಸಂಗಮವಾಗಿ ಬೆಳೆದು ಬಂದ ಮನೆತನದವರು, ಎಂಬುದು ಅತಿಶಯದ ಮಾತಲ್ಲ.

ಸೋಮಶೇಖರ ಸಾಲಿ ಅವರ ಅಜ್ಜ ರುದ್ರಯ್ಯನವರು, ತ್ರಿಕಾಲ ಪೂಜಾನಿಷ್ಠರು. ಶರಣ ಮಾರ್ಗಾವಲಂಬಿಗಳು. ಸಾಲಿಯವರ ಮಾತಾಮಹ ಜಂಗಿನ ಮುರಿಗೆಯ್ಯನವರು ಸಾತ್ವಿಕರು, ಉಜ್ವಲ ಕನ್ನಡಾಭಿಮಾನಿಗಳು, 'ಕರ್ನಾಟಕದ ಏಕೀಕರಣ'ಕ್ಕಾಗಿ ದುಡಿದವರು. 'ಕರ್ನಾಟಕ ಚೇಂಬರ್ ಆಫ್ ಕಾಮರ್ಸ್'ನ (Karnataka Chamber of Commerce) ಸಂಸ್ಥಾಪಕರೂ ಆಗಿದ್ದ ಇವರು ಈ ಭಾಗದ ಗೌರವನೀಯ ಧುರೀಣರೆನಿಸಿದ್ದರು. ಸಾಲಿಯವರ ತಂದೆ ಮಾಗುಂಡಯ್ಯನವರು ಹತ್ತಿ, ಅರಳೆಯ ಗುಣಮಟ್ಟ

ನಿರ್ಧರಿಸುವಲ್ಲಿ, ಬೆಲೆಗಟ್ಟುವಲ್ಲಿ ಹೊಂದಿದ್ದ ನೈಪುಣ್ಯತೆ ಹಾಗೆಯೇ ವಿದೇಶಿ ಕಂಪೆನಿಗಳ ಪರವಾಗಿ ನಡೆಯಿಸುತ್ತಿದ್ದ ದೊಡ್ಡ ಪ್ರಮಾಣದ ವ್ಯಾಪಾರಗಳಿಂದಾಗಿ 'ಅರಳಿ ದೊರೆ' (Cotton King) ಎಂದೇ ಪ್ರಖ್ಯಾತರಾಗಿದ್ದವರು. ಇಂಥದೊಂದು ವಿಶಿಷ್ಟ ಕೌಟುಂಬಿಕ, ಸಾಮಾಜಿಕ ಪರಿಸರವು ಸೋಮಶೇಖರ ಸಾಲಿಯವರ ಬಹುಮುಖ ವ್ಯಕ್ತಿತ್ವದ ಹಿನ್ನೆಲೆಗಿದೆ.

೧೯೨೨ರ ನವೆಂಬರ್ ೭ರಂದು, ತಾಯಿಯ ತವರೂರಾದ ಬಾಗಲಕೋಟ ಬಳಿಯ ಚಿಕ್ಕಲಗುಂಡಿಯಲ್ಲಿ ಸೋಮಶೇಖರ ಸಾಲಿ ಹುಟ್ಟಿದರು. ಸಂಸ್ಕೃತಿ-ಸಂಪತ್ತು ಎರಡಕ್ಕೂ ಕೊರತೆಯಿಲ್ಲದ ಪರಿಸರದಲ್ಲಿ ಬೆಳೆದರು. ಸಾಲಿಯವರ ಒಲವು, ಆಸಕ್ತಿಗಳಿಗೆ ಹಿರಿಯರ ಪ್ರೋತ್ಸಾಹ ಇದ್ದೇ ಇತ್ತು. ಇವರಲ್ಲಿ ಚಿಕ್ಕಂದಿನಿಂದಲೇ ಕಲಾಭಿರುಚಿ, ಕಲಾಸಕ್ತಿ ಕುದುರಲು ಕಾರಣವಾದ ಸಂದರ್ಭಗಳು ಅನೇಕ. ಅಕಾಲವಾಗಿ ಮರಣ ಹೊಂದಿದ ಹಿರಿಯಣ್ಣ ಚನ್ನಬಸವಯ್ಯ ಜಲವರ್ಣದ ನಿಸರ್ಗ ಚಿತ್ರಣ, ಇಲಸ್ಟ್ರೇಟೆಡ್ ವೀಕ್ಲಿ ಮುಂತಾದ ಪತ್ರಿಕೆಗಳಲ್ಲಿನ ಆಕರ್ಷಕ ಚಿತ್ರಗಳನ್ನು ಬಿಡಿಸುತ್ತಿದ್ದರೆ, ಹಾಗೆಯೇ, ಕಕ್ಕ ಶರಣಯ್ಯನವರು ಹುಡಿವರ್ಣ ಹಾಗೂ ಪೆನ್ಸಿಲ್‌ನಿಂದ ಚಿತ್ರ ಬಿಡಿಸುತ್ತಿದ್ದರೆ ಸೋಮಶೇಖರ ಸಾಲಿ ಅವರು ತನ್ಮಯವಾಗಿ ನೋಡುತ್ತಿದ್ದರು. ಅವರ ಅನುಕರಣೆಯನ್ನು ಮಾಡುತ್ತಿದ್ದರು.

ಸಾಲಿಯವರಲ್ಲಿನ ಕಲಾಸಕ್ತಿಯು ಪ್ರೌಢಶಾಲೆಯಲ್ಲಿ ಅಂದು ಕಲಾ ಶಿಕ್ಷಕರಾಗಿದ್ದ ಶ್ರೀ ಎಚ್.ಎನ್. ಬಿರಾದಾರ, ಇಂಗ್ಲೀಷ್ ಶಿಕ್ಷಕರಾಗಿದ್ದ ಶ್ರೀ ಎ.ಪ್ಪಿ. ಶಾಸ್ತ್ರೀಯವರಿಂದ ಇನ್ನಷ್ಟು ಬೆಳೆಯಿತು. ಶಾಲೆಯ ಕೈಬರಹ ಪತ್ರಿಕೆಯ ಅಲಂಕರಣ ಹಾಗೂ ಅದರೊಳಗಿನ ಬೋಧಿಸತ್ವ ಪದ್ಮಪಾಣಿ, ಬೇಲೂರು ಶಿಲಾಬಾಲಿಕೆಯರು, ಹಂಪೆಯ ಕಲ್ಲಿನರಥ ಮುಂತಾದ ಚಿತ್ರಗಳು

ಸಾಲಿಯವರಲ್ಲಿನ ಕಲಾ ಪ್ರತಿಭೆಯನ್ನು ಆಗಲೇ ಸೂಚಿಸಿದ್ದವು. ಅಂದು ಶಾಲೆಗೆ ಸಂದರ್ಶನಪಿತ್ತ ದೇಶದ ಖ್ಯಾತ ಇತಿಹಾಸಕಾರ ಸರ್ ಜದುನಾಥ ಸರ್ಕಾರ್ ಅವರು ಬಾಲಕ ಸಾಲಿಯವರ ಕಲಾ ಪ್ರತಿಭೆಯನ್ನು ಗುರುತಿಸಿ ಪ್ರಶಂಸಿಸಿದ್ದರು. ಈ ಎಲ್ಲ ಸಂದರ್ಭಗಳು ಸೋಮಶೇಖರ ಸಾಲಿಯವರು ಒಬ್ಬ ಕಲಾವಿದನಾಗಿ ಬೆಳೆಯುವುದನ್ನು ದೃಢಪಡಿಸಿದ್ದವು.

೧೯೪೧ರಲ್ಲಿ ಮೆಟ್ರಿಕ್ಯುಲೇಶನ್ ಪೂರೈಸಿದ ಸಾಲಿಯವರಿಗೆ ಯಾಂತ್ರಿಕವಾಗಿ ಸಾಗುತ್ತಿದ್ದ ಓದು, ಕಲಿಕೆಗಳಲ್ಲಿ ಆಸಕ್ತಿ ಮೂಡಲಿಲ್ಲ. ಬದಲಾಗಿ ಮುಂಬೈಯ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸನ್ನೋ, ಶಾಂತಿನಿಕೇತನವನ್ನೋ ಸೇರಿ ಕಲಾಶಿಕ್ಷಣ ಪಡೆಯಬೇಕೆಂಬ ಅಮಿತವಾದ ಉತ್ಸಾಹ ಹೊಂದಿದರು. ಅದೇ ಹೊತ್ತಿಗೆ ದ್ವಿತೀಯ ಜಾಗತಿಕ ಯುದ್ಧದ ಬಿರುಗಾಳಿ ಬೀಸಿತು. ಆ ನಗರಗಳಿಂದಲೇ ಜನ ಸುರಕ್ಷಿತ ಸ್ಥಳಗಳಿಗೆ ವಲಸೆ ಬರುತ್ತಿದ್ದ ಸಮಯದಲ್ಲಿ ಅಲ್ಲಿಗೆ ಹೋಗುವುದು ಆತಂಕಕಾರಿ ಎನಿಸಿತು. ಅದರಿಂದಾಗಿ ಸಾಲಿಯವರ ಉತ್ಸಾಹ ಕುಂದಿತು. ಅನಿವಾರ್ಯದಿಂದಾಗಿ ಬೆಳಗಾವಿಯ ಲಿಂಗರಾಜ ಕಾಲೇಜು ಸೇರಿ ಸಾಮಾನ್ಯಶಿಕ್ಷಣ ಮುಂದುವರೆಸಿದರು. ಅಲ್ಲಿಯೂ ಅವರನ್ನು ಜನಪ್ರಿಯಗೊಳಿಸಿದ್ದು ಕಲಾಸಕ್ತಿಯೇ. ಕಾಲೇಜಿನ ಚಟುವಟಿಕೆಗಳಲ್ಲಿ ಸ್ಪರ್ಧಿಸುವುದು, ಬಹುಮಾನ ಗಳಿಸುವುದು, ಕಲಾ ಪ್ರದರ್ಶನ ಮುಂತಾಗಿ ಅವರಲ್ಲಿನ ಕಲಾ ವಿಕಾಸ ನಡೆದೇ ಇತ್ತು. ಅಂದು ಮುಖ್ಯ ಅತಿಥಿಯಾಗಿ ಬಂದಿದ್ದ ಡಾ. ಶಿವರಾಮ ಕಾರಂತರು ಸಾಲಿಯವರಲ್ಲಿ ಹುದುಗಿದ್ದ ಕಲಾ ಪ್ರತಿಭೆಯನ್ನು ಗುರುತಿಸಿದರು. ಅಲ್ಲದೆ ಅವರು ಸಾಲಿಯವರಿಗೆ ಸಾಮಾನ್ಯ ಶಿಕ್ಷಣವನ್ನು ಬಿಟ್ಟು ಕಲಾಶಿಕ್ಷಣವನ್ನೇ ಮುಂದುವರಿಸಲು ಸಕಾಲಿಕ ಸಲಹೆ ಮಾಡಿದರು. ಆಗ ಸಾಲಿಯವರು ಮತ್ತೆ

ಮುಂಬೈ, ಕಲ್ಕತ್ತಾಗಳಲ್ಲಿ ಕಲಾಭ್ಯಾಸ ಮಾಡುವ ಕನಸು ಕಂಡರು. ಆದರೆ, ಆಷ್ಟೊತ್ತಿಗೆ 'ಚಲೇಜಾವ್ ಚಳುವಳಿ' ಹರಡಿತು. ಅದು ಸಾಲಿಯವರನ್ನು ಆಕರ್ಷಿಸಿತು. ತತ್‌ಪರಿಣಾಮವಾಗಿ ಸಾಲಿಯವರು ಮುಂಬೈ ಕಲ್ಕತ್ತಾಗಳಲ್ಲಿನ ಕಲಾ ಶಾಲೆಗಳಿಗೆ ಸೇರಲು ಸಾಧ್ಯವಾಗಲಿಲ್ಲ.

ಅನಂತರ, ೧೯೪೪ರಲ್ಲಿ ಸೋಮಶೇಖರ ಸಾಲಿಯವರು ಮತ್ತೆ ಕಲಾ ಶಿಕ್ಷಣ ಪಡೆಯಲು ಮುಂದಾದರು. ಧಾರವಾಡದ ಖ್ಯಾತ ಕಲಾವಿದ ಶ್ರೀ ಡಿ.ವ್ಹಿ. ಹಾಲಭಾವಿಯವರು ೧೯೩೮ರಷ್ಟು ಹಿಂದೆಯೇ ಉತ್ತರ ಕರ್ನಾಟಕದ ಈ ಭಾಗದಲ್ಲೇ ಪ್ರಥಮವಾಗಿ ಆರಂಭಿಸಲಾದ ಕಲಾಶಾಲೆಯನ್ನು (School of Arts) ಸೇರಿದರು. ಹಾಲಭಾವಿಯವರ ಮಾರ್ಗದರ್ಶನದಲ್ಲಿ ಎರಡು ವರ್ಷ ಕಲಾ ಶಿಕ್ಷಣ ಪಡೆದರು. ಆಮೇಲೆ, 'ಕಲಾಗುರು' ಎಂದೇ ಪ್ರಖ್ಯಾತರಾದ ಶ್ರೀ ಜಿ.ಎಸ್. ದಂಡಾವತಿಮಠ ಅವರ ಮಾರ್ಗದರ್ಶನದಲ್ಲಿ, ಮುಂಬೈಯ ಅವರ ಹೆಸರಾಂತ ಕಲಾಶಾಲೆ 'ನೂತನಕಲಾಮಂದಿರ'ದಲ್ಲಿ ಕಲಾ ಶಿಕ್ಷಣ ಪಡೆದರು. ಅನಂತರ ಪೇಂಟಿಂಗ್ ಡಿಪ್ಲೋಮಾ ಅಭ್ಯಾಸ ಮಾಡಲು ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಪ್ರವೇಶ ಪಡೆದರು. ಅಲ್ಲಿನ ಭಾರತೀಯ ಚಿತ್ರಕಲಾ ವಿಭಾಗದ ಮುಖ್ಯಸ್ಥರಾಗಿದ್ದ ಪ್ರಸಿದ್ಧ ಕಲಾವಿದ ಶ್ರೀ ಆಹಿವಾಸೆಯವರ ಮಾರ್ಗದರ್ಶನವು ಸಾಲಿಯವರ ಮೇಲೆ ತುಂಬಾ ಪರಿಣಾಮ ಬೀರಿತು. ಪಾಶ್ಚಾತ್ಯ ಕಲಾ ಪರಂಪರೆಯಿಂದ ಪ್ರಭಾವಿತರಾಗಿ ಅದನ್ನೇ ಅನುಕರಿಸುತ್ತಲಿದ್ದ ಸಾಲಿಯವರ ಚಿತ್ರರಚನೆಗೆ ಶ್ರೀ ಆಹಿವಾಸೆಯವರು ದೇಶಿಯ ಮೆರುಗನ್ನು ಕೊಟ್ಟರು. ಭಾವಚಿತ್ರಗಳ ರಚನೆಗಳಲ್ಲಿ ಅಂದಿನ ಪ್ರಸಿದ್ಧ ಕಲಾಚಾರ್ಯರೆನಿಸಿದ್ದ ಶ್ರೀ ಅಡುರಕರ, ಶ್ರೀ ಪಾಲ್ಶಿಕರ ಅವರಿಂದಲೂ ಸಾಲಿಯವರು ಪ್ರಭಾವಿತರಾದರು. ಆದರೆ ಮುಂಬೈಯ ವಾತಾವರಣವು

ಸಾಲಿಯವರಿಗೆ ಒಗ್ಗದ ಕಾರಣ ಅನಾರೋಗ್ಯದಿಂದ ಬಳಲತೊಡಗಿದರು. ಪರಿಣಾಮವಾಗಿ ಅಧ್ಯಯನವನ್ನು ಅಷ್ಟಕ್ಕೆ ನಿಲ್ಲಿಸಿ ಮರಳಿ ಬರಬೇಕಾಯಿತು.

ಮುಂದೆ ನಾಡಿನ ಖ್ಯಾತ ಕಲಾವಿದರಾಗಿದ್ದ ಶ್ರೀ ಎಂ.ವ್ಹಿ. ಮಿಣಜಿಗಿಯವರಲ್ಲಿ ಸಾಲಿಯವರ ಕಲಾಭ್ಯಾಸ ಸಾಗಿತು. ಶ್ರೀ ಮಿಣಜಿಗಿಯವರ ವ್ಯಕ್ತಿತ್ವ ಹಾಗೂ ಕಲಾಸಾಧನೆಯಿಂದ ತುಂಬಾ ಪ್ರಭಾವಿತರಾದರು. ಮಿಣಜಿಗಿಯವರ ಆಪ್ತ ಶಿಷ್ಯರಲ್ಲಿ ಒಬ್ಬರಾದರು. ೧೯೫೦ರಲ್ಲಿ ಅಂದು ಸರ್. ಜೆ.ಜೆ.ಸ್ಕೂಲ್ ಆಫ್ ಆರ್ಟ್ಸನಲ್ಲಿ ನಡೆಯುತ್ತಲಿದ್ದ ಚಿತ್ರಕಲಾ ಅಧ್ಯಯನದ ಅಂತಿಮ ಪರೀಕ್ಷೆ ಡಿಪ್ಲೋಮೊ ಗಳಿಸಿದರು.

ಕಲಾಧ್ಯಯನ ಪೂರ್ತಿಗೊಳಿಸುತ್ತಿದ್ದಂತೆ ಮುಂಬೈ ಚಿತ್ರರಂಗದಲ್ಲಿ ಕೆಲಸ ಮಾಡುವ ಅವಕಾಶ ಒದಗಿ ಬಂದಿತ್ತಾದರೂ ಅನಿವಾರ್ಯವಾಗಿ ಮನೆತನದ ಉದ್ಯಮವಾದ ಅರಳೆ ವ್ಯಾಪಾರದಲ್ಲಿ ತೊಡಗಬೇಕಾಯಿತು. ಆದರೂ ಕಲಾಕ್ಷೇತ್ರವು ಅವರ ಮನಸ್ಸನ್ನು ಸೆಳೆಯುತ್ತಲೇ ಇತ್ತು. ಮುಂದೆ ಶ್ರೀ ಮಿಣಜಿಗಿಯವರ ಆಶಯದಂತೆ ಅವರು ಪ್ರಾಚಾರ್ಯರಾಗಿದ್ದ ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಕಲಾ ಉಪನ್ಯಾಸಕರಾಗಿ ಸೇರಿದರು. ಸುಮಾರು ಎರಡು ವರ್ಷಗಳ ಕಾಲ ಕಲಾ ಸೇವೆ ಮಾಡಿದರು. ಸಾಲಿಯವರ ಕಲೆ ಹಾಗೂ ವ್ಯಕ್ತಿತ್ವದ ಬಗ್ಗೆ ತುಂಬು ವಿಶ್ವಾಸ ಹೊಂದಿದ್ದ ಮಿಣಜಿಗಿಯವರು ಅವರನ್ನು ಆ ಕಲಾಶಾಲೆಯ ಪ್ರಾಚಾರ್ಯರನ್ನಾಗಿ ಮಾಡುವ ಹಂಬಲ ಹೊಂದಿದ್ದರು. ಹೆಚ್ಚಿನ ಕಲಾ ಶಿಕ್ಷಣ ಪಡೆಯಲು ಪರದೇಶಕ್ಕೂ ಕಳುಹಿಸಿಕೊಡುವ ಹಂಬಲ ಹೊಂದಿದ್ದರು.

ಆದರೆ, ಅಷ್ಟೊತ್ತಿಗೆ ಸಾಲಿಯವರ ತಂದೆ ಅನಾರೋಗ್ಯದಿಂದ ಹಾಸಿಗೆ ಹಿಡಿದರು. ಅದೂವರೆಗೆ ಮನೆತನ ಹಾಗೂ ವ್ಯಾಪಾರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಅವರಿಗೆ ಅದು ಸಾಧ್ಯವಾಗದಾಯಿತು. ಹಿರಿಯ ಮಗ ಸೋಮಶೇಖರ ಸಾಲಿಯವರು ಮತ್ತೆ ಕಲಾ ಸೇವೆಯನ್ನು ಬಿಟ್ಟುಕೊಡಬೇಕಾಯಿತು. ಮತ್ತೆ ತಲೆಮಾರಿನಿಂದ ಬಂದ ಅರಳೆ ವ್ಯಾಪಾರಕ್ಕೆ ನಿಂತರು. ಅರಳೇ ವ್ಯಾಪಾರೋದ್ಯಮದಲ್ಲಿ ಕಾಲಿಟ್ಟ ಸೋಮಶೇಖರ ಸಾಲಿಯವರು ತಮ್ಮ ತಂದೆಯಿಂದಲೇ ಹತ್ತಿ, ಅರಳೆ ಪರಿಶೀಲನಾ ನೈಪುಣ್ಯತೆ ಹಾಗೂ ವ್ಯವಹಾರದ ಗುಟ್ಟನ್ನು ಬಳುವಳಿಯಾಗಿ ಪಡೆದುಕೊಂಡಿದ್ದರು. ಅದು ಅವರನ್ನು ವ್ಯಾಪಾರಿರಂಗದಲ್ಲಿ ನೆಲೆಗೊಳ್ಳುವಂತೆ ಮಾಡಿತು. ಅಲ್ಲದೆ ಹೆಸರನ್ನೂ ಸಂಪತ್ತನ್ನೂ ತಂದುಕೊಟ್ಟಿತು. ಆದರೆ ಸೋಮಶೇಖರ ಸಾಲಿಯವರ ಮನಸ್ಸು ತಮ್ಮ ಮೂಲ ಆಸಕ್ತಿಯಾದ ಚಿತ್ರಕಲೆ ಹಾಗೂ ಕಲಾ ಚಟುವಟಿಕೆಗಳ ಬಗ್ಗೆ ಸದಾ ಯೋಚಿಸುತ್ತಿತ್ತು. ಅವರಿಗೆ ಸತತವಾಗಿ ಚಿತ್ರರಚನೆ ಮಾಡುವುದಾಗಲಿ, ತಮ್ಮ ಏಕವ್ಯಕ್ತಿ ಪ್ರದರ್ಶನಾದಿಗಳನ್ನು ಏರ್ಪಡಿಸುವುದಾಗಲಿ ಆಗುತ್ತಿರಲಿಲ್ಲವಾದರೂ ವ್ಯಾಪಾರ ವ್ಯವಹಾರದ ಮಧ್ಯೆಯೂ ತಮ್ಮಲ್ಲಿನ ಸೃಜನಶೀಲತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇದ್ದರು. ಅದರ ಫಲವಾಗಿ ಅನೇಕ ರೇಖಾಚಿತ್ರಗಳು, ಹುಡಿವರ್ಣ, ಜಲವರ್ಣ ಹಾಗೂ ತೈಲವರ್ಣ ಚಿತ್ರಗಳು ರಚನೆಗೊಂಡವು. ಅವುಗಳಲ್ಲಿ ಸಾಲಿಯವರ ಹಲವಾರು ಕಲಾಕೃತಿಗಳು ಗಣ್ಯವ್ಯಕ್ತಿ ಹಾಗೂ ಸಂಸ್ಥೆಗಳ ಸಂಗ್ರಹಗಳನ್ನು ಸೇರಿವೆ.

ಸೋಮಶೇಖರ ಸಾಲಿ ಅವರ ಕಲಾಕೃತಿಗಳಲ್ಲಿ ಹುಡಿವರ್ಣ, ತೈಲವರ್ಣ ಅಥವಾ ಸಾಮಾನ್ಯ ಪೆನ್ಸಿಲ್‌ನಿಂದ ಮಾಡಿದ ರೇಖಾಚಿತ್ರ ಯಾವುದಾಗಿದ್ದರೂ ಅವುಗಳಲ್ಲಿ ಅವರದೇ ಆದ ಕೆಲವು ವೈಶಿಷ್ಟತೆಗಳನ್ನು ಗುರುತಿಸ ಬಹುದು.

ಸಾಲಿಯವರು ನವೋದಯ ಅಥವಾ ರೋಮ್ಯಾಂಟಿಕ್ ಸಂಪ್ರದಾಯದ ಒಬ್ಬ ಹಿರಿಯ ಕಲಾವಿದರು. ಇವರು ಕಲಾ ಜೀವನವೂ ಕೂಡ ಒಂದು ವಿಶಿಷ್ಟವಾದ ಹಿನ್ನೆಲೆಯಲ್ಲಿ ರೂಪುಗೊಂಡುದಾಗಿದೆ. ಒಂದೆಡೆ, ಬ್ರಿಟಿಷ್ ಸಾಮ್ರಾಜ್ಯದ ಪ್ರಭುತ್ವ ಸಾಧ್ಯವಾದಷ್ಟು ಅವರನ್ನೇ, ಅವರ ಜೀವನ ವಿಧಾನವನ್ನೆ ಅನುಕರಿಸುವುದರಲ್ಲಿ ಸಾರ್ಥಕತೆ ಕಾಣುವ ಗುಲಾಮಗಿರಿ, ಇನ್ನೊಂದೆಡೆ, 'ಭಾರತೀಯ ಪರಂಪರೆ, ಸಾಂಸ್ಕೃತಿಕ ವೈಭವ ಕಳೆದುಕೊಳ್ಳುತ್ತಿದ್ದೇವೆ ಎಂಬ ಎಚ್ಚರದೊಂದಿಗೆ ಭಾರತೀಯ ಸಾಂಸ್ಕೃತಿಕ ಸಂಪದವನ್ನು ಉಳಿಸಿಕೊಳ್ಳುವ, ಪುನರುಜ್ಜೀವನಗೊಳಿಸುವ ಜಾಗೃತಿ ಉಂಟಾಗುತ್ತಿತ್ತು. ಇಂಥ ಸಂಕ್ರಮಣ ಸ್ಥಿತಿಗೆ ಯಾವ ಕ್ಷೇತ್ರವೂ ಹೊರತಾಗಿರಲಿಲ್ಲ. ಚಿತ್ರಕಲಾ ಕ್ಷೇತ್ರವು ಕೂಡ ಇಂಥ ಸಂಕ್ರಮಣಾವಸ್ಥೆಯನ್ನು ಪಾರುಗಾಣುತ್ತಲಿದ್ದ ಸಂದರ್ಭವದು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧಕ್ಕಾಗಲೇ ಮುಂಬಯಿ, ಮದ್ರಾಸ್, ಕಲ್ಕತ್ತಾಗಳಲ್ಲಿ ಕಲಾ ಶಾಲೆಗಳು ಆರಂಭಗೊಂಡಿದ್ದವು. ವಿಕ್ಟೋರಿಯನ್ ಯುಗದ ಕಲಾಶಿಕ್ಷಕರಿಂದ ಪಾಶ್ಚಾತ್ಯ ಕಲೆಯ ಬೋಧನೆ ತೊಡಗಿಯಾಗಿತ್ತು. ಭಾರತೀಯ ಕಲಾಪಂಪರೆಯ ಬಗೆಗೆ ಅರಿವಿಲ್ಲದ ಅಪಕ್ವ ಆಲೋಚನಾ ಪ್ರಚಾರಗಳು ಹರಡಿಕೊಂಡು ದೇಶಿ ಕಲಾ ಪರಂಪರೆಯ ಬಗ್ಗೆ ಅಸಡ್ಡೆ, ತಿರಸ್ಕಾರ ಮೂಡಿಸುತ್ತಲಿದ್ದವು. ಅದೇ ಕಾಲಕ್ಕೆ ದೇಶಿಯ ಹಾಗೂ ವಿದೇಶಿಯ ಪರಿಣತರು ಭಾರತೀಯ ಕಲಾ ಸಂಪ್ರದಾಯದ ಮೂಲಭೂತ ಕಲ್ಪನೆ, ತಾತ್ವಿಕ ಹಿನ್ನೆಲೆ, ಕಲಾ ವೈಭವದತ್ತ ಜಗತ್ತಿನ ಕಣ್ಣು ತೆರೆಯಿಸುವ ಪ್ರಯತ್ನವನ್ನು ಮಾಡುತ್ತಲಿದ್ದರು. ಹೀಗೆ ಭಾರತೀಯರು, ಭಾರತೀಯರಲ್ಲ-ದವರು ಅನುಭವಿಸುತ್ತಲಿದ್ದ ಸಂದಿಗ್ಧ ಹಾಗೂ ವಿಶಿಷ್ಟ ಅವಧಿಯಲ್ಲಿಯೇ ಸೋಮಶೇಖರ ಸಾಲಿಯವರು ತಮ್ಮ ಕಲಾ ಜೀವನವನ್ನು ರೂಪಿಸಿಕೊಂಡರು.

ಪಾಶ್ಚಾತ್ಯ ಹಾಗೂ ಭಾರತೀಯ ಕಲಾ ಸಂಪ್ರದಾಯಗಳಲ್ಲಿ ಪರಿಣಿತರಾಗಿದ್ದ ಶ್ರೀಯುತರಾದ ಆಠವಾಸೆ, ಎಂ.ವ್ಹಿ. ಮಿಣಜಿಗಿ ಆಡುರಕರ, ಪಾಳ್ಸಿಕರ ಮುಂತಾದ ಕಲಾವಿದರು, ದಂಡಾವತಿಮಠ ಮತ್ತು ಡಿ.ವ್ಹಿ. ಹಾಲಭಾವಿಯವರಂತಹ ಕಲಾಗುರುಗಳ ಮಾರ್ಗದರ್ಶನ ದೊರೆತುದುದು ಸಾಲಿಯವರ ಪಾಲಿನ ಭಾಗ್ಯವಾಯಿತು. ಅಷ್ಟೇ ಅಲ್ಲ, ಅವರ ಕಲಾಜೀವನ, ಕಲಾಕೃತಿಗಳು ವಿಶಿಷ್ಟವಾಗಿ ಬೆಳೆದುಬರಲು, ಕಾರಣವಾಯಿತೆನ್ನಬಹುದು.

ಸೋಮಶೇಖರ ಸಾಲಿ ಅವರ ಒಟ್ಟು ಕಲಾಕೃತಿಗಳನ್ನು ನೋಡಿದಾಗ ಕ್ರಿಯಾಶೀಲ ಕಲಾವಿದನೊಬ್ಬನು ಹೊಂದಿರಬಹುದಾದ ಎಲ್ಲ ಪ್ರಕಾರದ ರಚನೆಗಳಲ್ಲಿನ ಆಸಕ್ತಿಯನ್ನು ಕಾಣಬಹುದು. ಆದರೂ ಭಾವಚಿತ್ರ ರಚನೆ (Portrait Painting), ಸಂಯೋಜನೆ (Compositon)ಗಳಲ್ಲಿನ ಅವರ ವಿಶೇಷಾಸಕ್ತಿಯನ್ನು ಗುರುತಿಸಬಹುದು. ಸಾಲಿಯವರ ಕಲಾಕೃತಿ ರಚನೆಗಳಲ್ಲಿ ಪೆನ್ಸಿಲ್ ಮೊದಲು ಮಾಡಿಕೊಂಡು ಹುಡಿವರ್ಣ, ಜಲವರ್ಣ ಹಾಗೂ ತೈಲವರ್ಣ ಮಾಧ್ಯಮಗಳನ್ನು ಬಳಸಿಕೊಂಡಿದ್ದಾರೆ. ಅವು ವಸ್ತು ಹಾಗೂ ನಿರ್ವಹಣೆಯ ದೃಷ್ಟಿಯಿಂದ ಕಲಾಸಕ್ತರ ಗಮನ ಸೆಳೆಯುತ್ತವೆ.

ಸಾಲಿಯವರ ಸಂಯೋಜನಾ ಚಿತ್ರಗಳು, ತಾವು ಒಳಗೊಂಡ ವಸ್ತುವಿನಿಂದಾಗಿ ವಿಶೇಷವೆನಿಸುತ್ತವೆ. ಅವರು ಹುಟ್ಟಿ ಬೆಳೆದ ಪರಿಸರದ ಪ್ರಭಾವವನ್ನು, ಅವರು ರಚಿಸಿದ ಚಿತ್ರದ ವಸ್ತುವಿನ ಆಯ್ಕೆ ಹಾಗೂ ಭಾವಚಿತ್ರಗಳ ರಚನೆಯಲ್ಲಿಯೂ ಕಾಣಬಹುದು. ಮನೆತನದ ಧಾರ್ಮಿಕ ವಾತಾವರಣವು ಸಾಲಿಯವರನ್ನು ಪೌರಾಣಿಕ ವಸ್ತು, ಶಿವಶರಣ ಶರಣೆಯರ ಜೀವನ ಘಟನಾವಳಿ, ಧಾರ್ಮಿಕ ಉತ್ಸವಗಳು ಮುಂತಾದ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಪ್ರೇರಣೆ ನೀಡಿದೆ. ಹಾಗೆಯೇ ವಿದ್ಯಾರ್ಥಿ

ದೆಸೆಯಲ್ಲಿಯೇ ಸ್ವಾತಂತ್ರ್ಯಾಂದೋಲನ ಸ್ವದೇಶಿ ಚಳುವಳಿಯಲ್ಲಿ ಭಾಗಿಯಾಗಿ ಗಾಂಧಿ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದರಿಂದ ಗ್ರಾಮೋದ್ಯೋಗ, ಕುಶಲ ಕಾರ್ಮಿಕ ಜೀವನ ಹಾಗೂ ರಾಷ್ಟ್ರೀಯ ನಾಯಕರ ಭಾವಚಿತ್ರಗಳ ರಚನೆಗೆ ಪ್ರೇರಣೆ ನೀಡಿದ್ದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸಾಲಿಯವರ 'ಕಲಾರಾಧನೆ', 'ಗಿರಿಜಾಕಲ್ಯಾಣ', 'ವಿರಾಗಿಣಿ ಅಕ್ಕಮಹಾದೇವಿ', 'ಚೆನ್ನಬಸವ ಜನನೋತ್ಸವ', 'ಗಣೇಶೋತ್ಸವ', 'ಚರಕಾ', 'ಗ್ರಾಮೋದ್ಯೋಗ' ಹಾಗೆಯೇ ಅನೇಕ ಮಠಾಧಿಪತಿಗಳು, ಗಾಂಧಿ, ವಲ್ಲಭ ಭಾಯಿ ಪಟೇಲ್, ನೆಹರು ಮುಂತಾದ ರಾಷ್ಟ್ರೀಯ ನಾಯಕರುಗಳು, ಅಬ್ರಹಾಂ ಲಿಂಕನ್ ಮೊದಲಾದ ಮಾನವತಾವಾದಿಗಳ ಭಾವಚಿತ್ರಗಳು ಗಮನಾರ್ಹವಾದ ಕಲಾಕೃತಿಗಳೆನಿಸಿವೆ.

ಸೋಮಶೇಖರ ಸಾಲಿಯವರ ವರ್ಣಚಿತ್ರ ಕಲಾಕೃತಿಗಳನ್ನು ಪರಿಚಯ ಮಾಡಿಕೊಳ್ಳುವ ಮೊದಲು ಅವರು ಪೆನ್ಸಿಲ್‌ನಿಂದ ರಚಿಸಿದ ಕೆಲವು ರೇಖಾಚಿತ್ರಗಳನ್ನು ಕಲಾ ಅಧ್ಯಯನದ 'ಒಂದು ಶಿಸ್ತು' ಎನ್ನುವ ದೃಷ್ಟಿಯಿಂದ ಗಮನಿಸಬಹುದು. ರೇಖಾಚಿತ್ರಣ ಚಿತ್ರಕಲೆಯ ಬುನಾದಿ. ಆದರಲ್ಲಿನ ವಿಶೇಷ ಸಾಧನೆಯೇ ಕಲಾವಿದನ ಕಲಾಸಿದ್ಧಿಯನ್ನು ನಿರ್ಧರಿಸುತ್ತದೆ. ಈ ದೃಷ್ಟಿಯಿಂದ ಸೋಮಶೇಖರ ಸಾಲಿಯವರು ರಚಿಸಿದ ನಗ್ನ ಚಿತ್ರ (Nude Studies) ಗಳು ಗಮನಾರ್ಹವಾಗಿವೆ. ಮಾನವಾಕೃತಿಗಳ ಅಂಗಾಂಗಗಳ ರಚನೆ ಒಟ್ಟು ಮನವಾಕೃತಿಯ ರಚನೆಗಳ ಸ್ಥೂಲ-ಸೂಕ್ಷ್ಮಗಳನ್ನು ಗಮನಿಸಬೇಕಾದ ಈ ರಚನೆಗಳಲ್ಲಿ ರೇಖಾ ಶುದ್ಧತೆ, ಘನಾಕೃತಿಗಳ ಪರಿಭಾವನೆ, ಛಾಯಾಂಕನ (Shading) ಪ್ರಮಾಣಬದ್ಧತೆ, ಮುಂತಾದವುಗಳ ಸಾವಯವ ಸಂಬಂಧವನ್ನು ಲಕ್ಷಿಸಬೇಕಾಗುತ್ತದೆ. ಸಾಲಿಯವರು ರಚಿಸಿದ ನಗ್ನ (Nude), ವಸ್ತ್ರಧಾರಿ

(Draped) ವ್ಯಕ್ತಿಗಳ ರೇಖಾಚಿತ್ರಗಳು ಹಾಗೂ ಗಣ್ಯರ ಭಾವಚಿತ್ರಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ. ಪೆನ್ಸಿಲ್‌ನಿಂದ ರಚಿಸಿದ ಬೇಲೂರು ಶಿಲಾಬಾಲಿಕೆಯರ ಚಿತ್ರರಚನೆಗಳಂತೂ ಸಾಲಿಯವರ ರೇಖಾ ಶುದ್ಧತೆ, ಸೂಕ್ಷ್ಮ ರಚನಾ ವಿವರ, ಆಯಾಮ ಕಲ್ಪನೆಗಳನ್ನು ಪ್ರತಿಬಿಂಬಿಸುವ ಉತ್ಕೃಷ್ಟ ರಚನೆಗಳಾಗಿವೆ. ತೈಲವರ್ಣ ಮಾಧ್ಯಮದ ಕಲಾಕೃತಿಗಳಲ್ಲಿ ಭಾವಚಿತ್ರ ರಚನೆಗಳು (Bust, life paintings) ಗಮನಾರ್ಹವಾಗಿವೆ. ರೂಪದರ್ಶಿಯ ಕುಳಿತ/ನಿಂತ ಭಂಗಿ, ಆದರಿಂದಾಗಿ ದೇಹದ ಭಾಗಗಳಲ್ಲಿ ತೋರುವ ಮಾಂಸಖಂಡಗಳ ಚಿತ್ರಣ, ರೂಪದರ್ಶಿಯ ಚರ್ಮದ ವರ್ಣ, ನೆಳಲು-ಬೆಳಕಿನ ಸಂಯೋಜನೆಯಿಂದಾಗಿ ಕಾಣುವ ವರ್ಣಛಾಯೆಗಳು (Colour tones) ಅವು ಕೊಡುವ ಆಯಾಮ (Dimension) ಕಲ್ಪನೆ, ಕಣ್ಣಿನ ಹೊಳಪು ಮುಂತಾದವುಗಳು ಸಾಲಿಯವರ ರಚಿಸಿದ ಭಾವಚಿತ್ರಕ್ಕೆ ಜೀವ ತುಂಬಿದ ಅಂಶಗಳಾಗಿವೆ. ತರುಣನೊಬ್ಬನ ಅರೆನಗ್ನ (Half nude) ಭಾವಚಿತ್ರ ಹಾಗೂ ಗಡ್ಡಧಾರಿ ವೃದ್ಧ, ಮಹಾತ್ಮಾಗಾಂಧಿ, ಮಹಿಳೆಯೊಬ್ಬರ ಭಾವಚಿತ್ರಗಳು ಇವರ ಉತ್ತಮ ಕಲಾಕೃತಿಗಳಾಗಿವೆ.

ಸಾಲಿಯವರ ಸಂಯೋಜನಾ ಚಿತ್ರಗಳು (Composition) ಕೂಡ ಗಮನಾರ್ಹ. ಅವುಗಳಲ್ಲಿ ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡ 'ಕಲಾರಾಧನೆ'ಯೂ ಒಂದು. ವರ್ಣಲೇಪನ ಮಾಡಿ ತೊಳೆದು ಮತ್ತೆ ತೆಳುವರ್ಣಲೇಪನ ಮಾಡುವ (Wash method) ಬಂಗಾಲಿ ಚಿತ್ರ ರಚನಾ ಪದ್ಧತಿಯನ್ನು ಅನುಸರಿಸಿದ ರಚನೆ ಇದಾಗಿದೆ. ಲಲಿತಕಲೆಗಳು ಚಿತ್ರ, ಶಿಲ್ಪ ಮತ್ತು ಕಾವ್ಯ ರಚನೆಗಳಲ್ಲಿ ಮಗ್ನರಾದ ಕಲಾವಿದರು ಅಪ್ರತ್ಯಕ್ಷರಾಗಿ ಕಲಾದೇವತೆಯ ಆರಾಧನೆಯಲ್ಲೇ ತೊಡಗಿರುತ್ತಾರೆ ಎಂಬುದನ್ನು ಈ

ಕಲಾಕೃತಿ ಪ್ರತಿಬಿಂಬಿಸುತ್ತದೆ. ಉಜ್ವಲ ಸೂರ್ಯೋದಯವನ್ನು ಕಣ್ಮುಂದೆ ನಿಲ್ಲಿಸುವ ಕಲಾದೇವತೆ ಗಗನಾಂಗಣದಲ್ಲಿ ಪ್ರತ್ಯಕ್ಷಗೊಳ್ಳುತ್ತಲಿದ್ದಾಳೆ. ಮೋಹಕವಾದ ಮಂಜು ಹರಡಿದ ಮುಂಜಾವನ್ನು ನೆನಪಿಸುವ ವಾತಾವರಣ ಚಿತ್ರಿತವಾಗಿದೆ. ಈ ಸುವರ್ಣ ವಾತಾವರಣದಲ್ಲಿ ಮಿಂದು ಮೈಮರೆತ ಕಲಾವಿದರು ಪ್ರೇರಿತರಾಗಿ ಚಿತ್ರ-ಶಿಲ್ಪ-ಕಾವ್ಯ ಸೃಷ್ಟಿ ಕಾರ್ಯದಲ್ಲಿ ಭಾವ ತಲ್ಲೀನರಾಗಿದ್ದಾರೆ. ಕಲಾವಿದರ ಪ್ರತಿಭಾ ಸಮರ್ಪಣೆಗೆ ಪ್ರತಿಯಾಗಿ ಹರಿದು ಹರಡುವ ಕಲಾದೇವತೆಯ ಕಾರುಣ್ಯದ ಸುಂದರ ಹಾಗೂ ಭಾವಪೂರ್ಣ ಕಲ್ಪನೆ ಮೂಡಿಸುತ್ತದೆ. ಈ ಕಲಾಕೃತಿಯು, ಲೋಕದಲ್ಲಿ ಅನವರತ ಸಾಗುವ, ನಿತ್ಯೋತ್ಸವವಾಗಿ ನಡೆಯುವ ಕಲಾರಾಧನೆಗಳ ಅಪೂರ್ವ ಅನುಭೂತಿ ಯನ್ನುಂಟುಮಾಡುತ್ತದೆ. ಉಜ್ವಲ ವರ್ಣಗಳನ್ನು ಸೌಮ್ಯವಾಗಿಸಿಕೊಳ್ಳುವ ಕಲಾವಿದ ಸಾಲಿಯವರ ಕೌಶಲ ಪ್ರಶಂಸನೀಯವೆನಿಸುತ್ತದೆ.

'ಗಿರಿಜಾ ಕಲ್ಯಾಣ' ಸಾಲಿಯವರ ಇನ್ನೊಂದು ತೈಲವರ್ಣ ಚಿತ್ರ. ಪೌರಾಣಿಕ ವಸ್ತುವನ್ನು ಆಧರಿಸಿದ ಈ ಚಿತ್ರವು ಮೋಹಕವಾಗಿದೆ. ಋಷಿಮುನಿಗಳು, ಗಿರಿರಾಜ, ದೇವಾನುದೇವತೆಗಳ ಸಮ್ಮುಖದಲ್ಲಿ ಶಿವ-ಪಾರ್ವತಿಯರ ಕಲ್ಯಾಣೋತ್ಸವದ ಸಂಭ್ರಮವನ್ನು ಬಿಂಬಿಸುವ ಚಿತ್ರಣವಿದು. ಚಿತ್ರದ ಕೇಂದ್ರವಾಗಿ ಶಿವ-ಗಿರಿಜೆಯರು ವಧು-ವರರಾಗಿ ಕಂಗೊಳಿಸಿದ್ದಾರೆ. ಒಂದೆಡೆ ಲಕ್ಷ್ಮೀ ಸಹಿತ ವಿಷ್ಣು, ಇನ್ನೊಂದೆಡೆ ಸರಸ್ವತಿ ಸಹಿತ ಬ್ರಹ್ಮ ಇದ್ದಾರೆ. ಬಾಳೆಯ ಕಂಬ, ತೋರಣಗಳಿಂದ ಅಲಂಕೃತವಾದ ಮಂಟಪದಲ್ಲಿ ಶಿವಪಾರ್ವತಿಯರ ಎದುರುಗಡೆ ಪಂಚಕಲಶ ಹೂಡಲಾಗಿದೆ. ವೃದ್ಧ ಮುನಿಯೊಬ್ಬರು ಮಂತ್ರಘೋಷ ಮಾಡುತ್ತಲಿದ್ದಾರೆ. ಶಿವಗಣವು ಆನಂದದಿಂದ ಮಂಗಳ ವಾದ್ಯಗಳನ್ನು ನುಡಿಸುತ್ತಲಿದೆ. ಶಿವನ ನಂದಿವಾಹನವು

ಕೂಡ ಚಿತ್ರಿತವಾಗಿದೆ. ಭಾರತೀಯ ಭಿತ್ತಿ ಚಿತ್ರಗಳನ್ನು ನೆನಪಿಗೆ ತರುವ ಈ ಚಿತ್ರರಚನೆ, ಸೌಮ್ಯ ಹಾಗೂ ಉಜ್ವಲ ವರ್ಣಗಳ ಹದವರಿತ ಮೇಳಾಪವನ್ನು ಹೊಂದಿ ಸಂಭ್ರಮ ಹಾಗೂ ಶಾಂತತೆಗಳ ವಿಶಿಷ್ಟ ಪರಿಣಾಮ ಬೀರುತ್ತದೆ. ಚಿತ್ರದಲ್ಲಿನ ನೀಲಿ ಹಾಗೂ ಹಸಿರುಗಳ ಆಧಿಕ್ಯವು ಗಿರಿರಾಜನ ನೆಲೆ ಹಿಮಾಲಯದ ಪವಿತ್ರ ವಾತಾವರಣದ ಕಲ್ಪನೆಯನ್ನು ನೋಡುಗರಲ್ಲಿ ಮೂಡಿಸುತ್ತದೆ.

ಶರಣ ಜೀವನ ಹಾಗೂ ಸಾಹಿತ್ಯದಿಂದ ಪ್ರಭಾವಿತರಾದ ಸಾಲಿಯವರು ಶರಣ ಶರಣೆಯರ ಜೀವನದ ಘಟನೆಗಳನ್ನು ಚಿತ್ರಿಸುವ ಹಲವಾರು ಚಿತ್ರರಚನೆಗಳನ್ನು ಮಾಡಿದ್ದಾರೆ. ಅದರಲ್ಲೂ ವೀರವಿರಾಗಿಣಿ ಮಹಾದೇವಿಯಕ್ಕ ಮಲ್ಲಿಕಾರ್ಜುನನನ್ನು ಕಾಣಹೊರಟ ಚಿತ್ರಗಳು ಗಮನಾರ್ಹವಾಗಿವೆ. ''ಅಳಿ ಸಂಕುಳವೆ .... ನೀವು ಕಾಣಿರೆ'' ಎಂಬ ಅಕ್ಕನ ವಚನವನ್ನು ದೃಶ್ಯೀಕರಿಸಿದಂತಿವೆ. ಈ ವಸ್ತುವನ್ನೇ ಆಧರಿಸಿದ ಮೂರು (ಎರಡು ಜಲವರ್ಣ, ಒಂದು ತೈಲವರ್ಣ) ಕಲಾಕೃತಿಗಳಿವೆ. ತೈಲಚಿತ್ರವನ್ನು ಪಾಶ್ಚಾತ್ಯ ನೈಜ ಶೈಲಿಯನ್ನು ಅಳವಡಿಸಿ ರಚಿಸಿದ್ದಾರೆ. ಜಲವರ್ಣದ ಕೃತಿಗಳು ಭಾರತೀಯ ಕಲಾ ಶೈಲಿಯನ್ನು ಅಳವಡಿಸಿದವುಗಳಾಗಿವೆ. ಚೆನ್ನ ಮಲ್ಲಿಕಾರ್ಜುನನ್ನು ಕಾಣುವ ಹಂಬಲ ಹೊತ್ತು ದಿಗಂಬರೆಯಾಗಿ ಕಾನನದ ಮಧ್ಯ ಸಾಗುತ್ತಲಿರುವ ಅಕ್ಕ, ಗಿರಿ, ತರು, ಬಳ್ಳಿ, ಪಶುಪಕ್ಷಿಗಳನ್ನು ಕಾತರಳಾಗಿ 'ಚೆಲುವ ಚೆನ್ನ ಮಲ್ಲಿಕಾರ್ಜುನನ್ನು ನೀವು ಕಂಡಿರೇ' ಎಂದು ಕೇಳುವ ಚಿತ್ರಣ ಎರಡು ಕೃತಿಗಳಲ್ಲಿದ್ದರೆ, ಇನ್ನೊಂದರಲ್ಲಿ ದಿಗಂಬರೆ ಅಕ್ಕ ಕರಸ್ಥಲದ ಲಿಂಗ ನಡೆಸಿಕೊಂಡು ಹೋದಂತೆ ಸುತ್ತಲ ಪ್ರಪಂಚದ ಪರಿವೆಯಿಲ್ಲದಂತೆ ಸಾಗಿದ

ಚಿತ್ರಣವಿದೆ. ಮಹಾದೇವಿಯಕ್ಕನ ಮನದ ಕುತೂಹಲ, ಕಾತರ, ನಿರ್ಧಾರಗಳನ್ನು ಈ ಕಲಾಕೃತಿಗಳು ತುಂಬಾ ಸಮರ್ಪಕವಾಗಿ ಚಿತ್ರಿಸಿವೆ.

ಸ್ವತಃ ಕಲಾವಿದರಾಗಿ ತಮ್ಮ ಕಲಾಕೃತಿಗಳ ಮೂಲಕ ನಾಡಿನ ಕಲಾಪರಂಪರೆಯಲ್ಲಿ ಸೇರುವ ಸೋಮಶೇಖರ ಸಾಲಿಯವರು ನಾಡಿನ ಚಿತ್ರಕಲಾಭಿವೃದ್ಧಿಗಾಗಿ ಪರಿಶ್ರಮಿಸಿದವರು. ಕರ್ನಾಟಕ ರಾಜ್ಯದ ಲಲಿತಾಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ ಇವರು ೧೯೮೪ರಿಂದ ೧೯೮೭ರ ವರೆಗೆ ಕರ್ನಾಟಕ ರಾಜ್ಯದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಮಹತ್ವದ್ದಾಗಿದೆ. ವಾರ್ಷಿಕ ಕಲಾ ಪ್ರದರ್ಶನ, ಕಲಾವಿದರ, ಕಲಾವಿದ್ಯಾರ್ಥಿಗಳ ಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾ ಪ್ರದರ್ಶನಗಳಿಗೆ ಸಹಾಯಧನ, ವಿದ್ಯಾರ್ಥಿವೇತನ, ಕಲಾವಿದರಿಗೆ ಗೌರವ ಪ್ರಶಸ್ತಿ, ಕಲಾವಿದರ ಜೀವನ. ಕಲಾಸಾಧನೆ, ಕುರಿತ ಪುಸ್ತಕ ಪ್ರಕಟಣೆ, ಈ ಮುಂತಾದ ಕಲಾಭಿವೃದ್ಧಿ ಕಲಾಪ್ರಪಂಚದ ಕಾರ್ಯಕ್ರಮಗಳನ್ನು ಅತ್ಯಂತ ಸಮರ್ಥವಾಗಿ ನಡೆಸಿಕೊಂಡು ಬಂದರು. ಈ ಅವಧಿಯಲ್ಲಿ ತಮ್ಮ ವ್ಯಾಪಾರೋದ್ಯಮವನ್ನು ಗಣನೆಗೆ ತಂದುಕೊಳ್ಳದೆ ಅತ್ಯಂತ ನಿಷ್ಠೆಯಿಂದ ಕಲಾವಿಕಾಸಕ್ಕಾಗಿ ಶ್ರಮಿಸಿದರು.

ಸಾಲಿಯವರ ಅಧಿಕಾರಾವಧಿಯಲ್ಲಿಯೇ ಸಂಚಾರಿ ಕಲಾಪ್ರದರ್ಶನ ವಾಹನ ನಿರ್ಮಾಣಗೊಂಡಿತು. ಇದರಿಂದ ನಾಡಿನ, ದೇಶದ ಶ್ರೇಷ್ಠ ಕಲಾವಿದರ ಹಾಗೂ ಅಕಾಡೆಮಿ ಸಂಗ್ರಹದ ಕಲಾಕೃತಿಗಳ ಪ್ರದರ್ಶನವನ್ನು ನಾಡಿನ ಮೂಲೆ ಮೂಲೆಗೂ ಕೊಂಡೊಯ್ದು ಪ್ರದರ್ಶಿಸಿ, ನಾಡಿನಾದ್ಯಂತ ಕಲಾವಾತಾವರಣವನ್ನು ನಿರ್ಮಿಸಲು ಸಾಧ್ಯವಾಯಿತು. ಕಲಾಮೇಳ, ಸಾಂಸ್ಕೃತಿಕ ಮೇಳ, ಸಮ್ಮೇಳನಾದಿಗಳು ನಡೆಯುವ ಸಣ್ಣ, ದೊಡ್ಡ ಪಟ್ಟಣಗಳಿಗೆ ಈ ವಾಹನ ಕಳುಹಿಸುವ ಮೂಲಕ ಕಲಾ ಪ್ರಸಾರ ಮಾಡಲು

ಸಾಧ್ಯವಾಯಿತು. ಇದು ಭಾರತದಲ್ಲಿಯೇ ಮೂರನೆಯದಾದ, ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಸಂಚಾರಿ ಕಲಾ ಪ್ರದರ್ಶನ ವಾಹನವೆಂಬುದು ಅಭಿಮಾನದ ಸಂಗತಿಯಾಗುತ್ತದೆ. ಇಂಥದೊಂದು ವಾಹನ ಸೌಕರ್ಯವನ್ನು ಅಕಾಡೆಮಿಗೆ ಸರಕಾರದಿಂದ ದೊರಕಿಸಿಕೊಂಡುದು ಸಾಲಿಯವರ ಕ್ರಿಯಾಶೀಲತೆಗೊಂದು ನಿದರ್ಶನವಾದರೆ, ಸಮಕಾಲೀನ ಕಲಾ ವಿಕಾಸವನ್ನು ವೀಕ್ಷಿಸಿ ರಾಜ್ಯದ ಲಲಿತಕಲಾ ಅಕಾಡೆಮಿಯಲ್ಲಿ ಕಲಾವಿದರಿಗೆ ಪ್ರಯೋಜನಕಾರಿಯಾಗುವ ಗ್ರಾಫಿಕ್ ಕಾರ್ಯಗಾರವೊಂದನ್ನು ಆರಂಭಿಸಿ ಅದನ್ನು ಸುಸಜ್ಜಿತಗೊಳಿಸಿದ್ದು ಇನ್ನೊಂದು ನಿದರ್ಶನವಾಗಿದೆ.

ಸಾಲಿಯವರು ಅಧ್ಯಕ್ಷರಾಗಿದ್ದಾಗ ಜರುಗಿದ ವಿಶ್ವ ಕನ್ನಡ ಸಮ್ಮೇಳನವು ಅವರ ಕರ್ತೃತ್ವ ಶಕ್ತಿಯನ್ನು ತೋರುವ ಒಂದು ಅಪೂರ್ವ ಸಂದರ್ಭ. ೧೯೮೫ರ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಲಲಿತಕಲಾ ಅಕಾಡೆಮಿಯು ಕಲಾಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಭಿತ್ತಿಚಿತ್ರಗಳ ಸಂಪುಟ, ಹಿರಿಯ ಕಲಾವಿದರ ಕಲಾಕೃತಿಗಳ ಕಾರ್ಡುಸೈಜಿನ ಸೆಟ್‌ಗಳ ಪ್ರಕಟಣೆ ಇತ್ಯಾದಿ ಕಲಾ ಚಟುವಟಿಕೆಗಳನ್ನು ಏರ್ಪಡಿಸುವ ಮೂಲಕ ಸಮಕಾಲೀನ ಹಾಗೂ ಸಾಂಪ್ರದಾಯಿಕ ಕಲಾಚಟುವಟಿಕೆಗಳಿಗೆ ಹೊಸ ಸ್ವರೂಪ ತಂದುಕೊಟ್ಟಿತು. ಹಾಗೆಯೇ ೧೯೮೬ರಲ್ಲಿ ಜರುಗಿದ ರಾಷ್ಟ್ರೀಯ ಮಹತ್ವದ ಸಾರ್ಕ್ (SARC) ಸಮ್ಮೇಳನದ ಸಂದರ್ಭದಲ್ಲಿ ದೇಶದ ಖ್ಯಾತ ಕಲಾವಿದರಾದ ಕೆ.ಕೆ. ಹೆಬ್ಬಾರ್ ಅವರ ನೇತೃತ್ವದಲ್ಲಿ ಕಲಾ ಶಿಬಿರ ಸಂಯೋಜಿಸಿದ್ದು ಸಾಲಿಯವರ ಆ ಕಾಲಾವಧಿಯ ಕೆಲವು ಮಹತ್ವದ ಚಟುವಟಿಕೆಗಳಲ್ಲಿ ಒಂದಾಗಿದೆ. ಈ ಎಲ್ಲ ಕಾರ್ಯಕ್ರಮಗಳ ಸಂಯೋಜನೆಯ ಹಿನ್ನೆಲೆಯಲ್ಲಿ ಸಾಲಿಯವರಿಗೆ ನಾಡಿನ

ಕಲಾ ಪರಂಪರೆಯ ಬಗೆಗಿದ್ದ ಕಾಳಜಿಯನ್ನೂ, ಅದನ್ನು ಸರಕಾರ, ಜನತೆಯ
ಗಮನಕ್ಕೆ ತರುವಲ್ಲಿನ ಕಾರ್ಯಕ್ಷಮತೆಯನ್ನೂ ಕಾಣಬಹುದಾಗಿದೆ.

ಸೋಮಶೇಖರ ಸಾಲಿಯವರು ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ
ಕ್ರಿಯಾಶೀಲ ಸದಸ್ಯರಾಗಿದ್ದು ಹಲವಾರು ವರ್ಷಗಳಿಂದ ಅದರ
ಉಪಾಧ್ಯಕ್ಷರಾಗಿ ಪರಿಷತ್ತಿನ ಬೆಳವಣಿಗೆ ಹಾಗೂ ವಿಸ್ತರಣೆಯಲ್ಲಿ ಮಹತ್ವದ
ಪಾತ್ರವಹಿಸಿದ್ದಾರೆ. ಹಾಗೆಯೇ ಉತ್ತರ ಕರ್ನಾಟಕದ ಪ್ರತಿಷ್ಠಿತ
ವಿದ್ಯಾಸಂಸ್ಥೆಯಾದ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ
ಸದಸ್ಯರಾಗಿದ್ದಲ್ಲದೆ ಹಲವಾರು ವರ್ಷಗಳಿಂದ ಆ ಸಂಘದ
ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸಾಲಿಯವರು ಸ್ವತಃ ಕವಿಗಳು. ಭಾಷೆ ಹಾಗೂ ಸಾಹಿತ್ಯದ ಬಗ್ಗೆ
ಸದಭಿರುಚಿಯನ್ನಿಟ್ಟುಕೊಂಡವರು. ಅವರ ಅನೇಕ ಕವನಗಳು ನಾಡಿನ
ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅವರು ಉತ್ತಮ ವಾಗ್ಮಿಗಳಾಗಿದ್ದು ಎಂಥ
ಜನಸ್ತೋಮವನ್ನು ಕೂಡ ತಮ್ಮ ವಾಗ್ಜಾಲದಿಂದ ಸೆರೆಹಿಡಿಯಬಲ್ಲರು. ಸ್ವಲ್ಪ
ಮಟ್ಟಿಗೆ ಸಂಗೀತವನ್ನು ಅಭ್ಯಸಿಸಿದ ಅವರು ಒಳ್ಳೆಯ ಗಾಯಕರೂ
ಆಗಿರುವುದೊಂದು ವಿಶೇಷವಾಗಿದೆ.

ಸ್ವಾತಂತ್ರ್ಯ ಚಳುವಳಿಯ ಮೂಲಕ ದೇಶದ ರಾಜಕೀಯ ಸಂಬಂಧವನ್ನು
ಪಡೆದುಕೊಂಡ ಸಾಲಿಯವರು "ಚಲೇಜಾವ್ ಚಳುವಳಿ"ಯಲ್ಲಿ
ಭಾಗಿಯಾದವರು. ಮಹಾತ್ಮಾ ಗಾಂಧೀಜಿಯವರ ವಿಚಾರದಿಂದ
ಪ್ರಭಾವಿತರಾದವರು. ಸ್ವದೇಶಾಭಿಮಾನ, ಖಾದಿ ವಸ್ತ್ರಧಾರಣ ಸ್ವಂತ ಸಾಫ್,
ಸಪಾಯಿಗಳನ್ನು ಮೈಗೂಡಿಸಿಕೊಂಡು ಬಂದವರು. ಗಾಂಧಿ ವಿಚಾರಗಳ

ಪ್ರಭಾವವು ಸಾಲಿಯವರ ಮೇಲೆ ಎಷ್ಟು ಗಾಢವಾಗಿತ್ತೆಂದರೆ ಅವರು ತಮ್ಮ ಮದುವೆಯ ಸಂದರ್ಭದಲ್ಲಿ ಬೀಗರು ಹಣ, ಉಡುಗೊರೆಗಳನ್ನು ಬೇಡಿದಷ್ಟು ಕೊಡುವಂತಿದ್ದರೂ ಕೇವಲ ಖಾದಿವಸ್ತ್ರಗಳನ್ನು ಮಾತ್ರ ಸ್ವೀಕರಿಸಿದರು. ಹಾಗೆಂದೇ ಅವರು ಇಂದಿಗೂ ಖಾದಿಧಾರಿ, ಗಾಂಧಿವಾದಿಯಾಗಿಯೇ ಉಳಿದಿದ್ದಾರೆ.

ದೇಶದ, ರಾಜ್ಯದ ರಾಜಕೀಯದಲ್ಲಿ ಹಲವಾರು ಸ್ಥಿತ್ಯಂತರಗಳು ಕಾಲಕಾಲಕ್ಕೆ ನಡೆಯುತ್ತ ಬಂದಿದ್ದರೂ ಪಕ್ಷಾಂತರಿಗಳಾಗದೇ ಅದೇ ನಿಷ್ಠೆ ಪ್ರಾಮಾಣಿಕತೆಗಳನ್ನು ಉಳಿಸಿಕೊಂಡು ಬಂದ ವ್ಯಕ್ತಿತ್ವ ಸಾಲಿಯವರದು. ಹಲವಾರು ರಾಷ್ಟ್ರಮಟ್ಟದ, ರಾಜ್ಯಮಟ್ಟದ ನಾಯಕರ ನಿಕಟವರ್ತಿಗಳಾಗಿ ಅವರ ವಿಶ್ವಾಸಕ್ಕೆ ಪಾತ್ರರಾಗಿ ಇಂದಿಗೂ ಅದೇ ಗೌರವವನ್ನು ಉಳಿಸಿಕೊಂಡು ಬಂದಿರುವುದು ಅವರ ಹೆಗ್ಗಳಿಕೆಯಾಗಿದೆ. ರಾಜ್ಯಮಟ್ಟದ ಅನೇಕ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆಗಳ ಸದಸ್ಯತ್ವ ಹೊಂದಿದ ಸಾಲಿಯವರು ವಿವಿಧ ಹುದ್ದೆಗಳನ್ನು ಅಲಂಕರಿಸಿ, ನಿಸ್ವಾರ್ಥ ಸೇವೆಗೈದು ಅಪರೂಪದ ರಾಜಕಾರಣಿ ಹಾಗೂ ಸಾಮಾಜಿಕ ಕಾರ್ಯಕರ್ತರೆನಿಸಿಕೊಂಡಿದ್ದಾರೆ.

ಸೋಮಶೇಖರ ಸಾಲಿಯವರದು ಬಹುಮುಖ ವ್ಯಕ್ತಿತ್ವ, ಬಹುಮುಖ ಕರ್ತೃತ್ವ. ಅಂತೆಯೇ ಅವರ ಸಾಧನೆ ಹಾಗೂ ಸೇವೆಯನ್ನು ಗುರುತಿಸಿ ಅನೇಕ ಮಠ, ಸಂಘ, ಸಂಸ್ಥೆಗಳು ಗೌರವಿಸಿವೆ. ಅನ್ವರ್ಥಕವಾದ ಬಿರುದಗಳನ್ನಿತ್ತು ಸನ್ಮಾನಿಸಿವೆ.

ದೆಹಲಿಯ ಆಲ್ ಇಂಡಿಯಾ ಫೈನ್ ಆರ್ಟ್ ಆ್ಯಂಡ್ ಕ್ರಾಫ್ಟ್ಸ ಸೊಸೈಟಿಯವರು (All India Fine Art and Crafts Society)

ಸಾಲಿಯವರು ಕಲಾಕ್ಷೇತ್ರಕ್ಕೆ ಗಣನೀಯವಾಗಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಗೌರವಿಸಿದ್ದಾರೆ. ಹಾಗೆಯೇ ಶ್ರೀಯುತರನ್ನು ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಳನದಲ್ಲಿ ಅವರು ಕಲೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಕಾಣಿಕೆಯನ್ನು ಲಕ್ಷಿಸಿ 'ಭಾರತ ಭಾಷಾ ಭೂಷಣ' ಎಂಬುದಾಗಿ ಬಿರುದನ್ನಿತ್ತು ಸನ್ಮಾನಿಸಲಾಯಿತು. ಬೆಂಗಳೂರಿನ ಶ್ರೀ ಕೊಳದ ಸಂಸ್ಥಾನ ಮಠದ ಆಶ್ರಯದಲ್ಲಿ ಜರುಗಲಾದ ಕರ್ನಾಟಕ ರಾಷ್ಟ್ರ ಭಾಷಾ ಪರಿಷತ್ ಸಮಾರಂಭದಲ್ಲಿ ಸಾಲಿಯವರಿಗೆ 'ಚಿತ್ರಕಲಾ ರತ್ನ' ಬಿರುದನ್ನಿತ್ತು ಗೌರವಿಸಲಾಯಿತು. ಶ್ರೀ ಶೈಲ ಸೂರ್ಯಸಿಂಹಾಸನಾಧೀಶ್ವರರಾದ ಜಗದ್ಗುರು ಜಚನಿ ಅವರು ಸಾಲಿಯವರಿಗೆ 'ಲಲಿತ ಕಲಾ ಸುಧಾಕರ' ಎಂಬ ಬಿರುದನ್ನು ದಯಪಾಲಿಸಿದರು. ಪ್ರಸಿದ್ಧ ಗದುಗಿನ ವಿಜಯ ಲಲಿತಕಲಾ ಸಂಸ್ಥೆಯು ಸಾಲಿಯವರ ಅಪೂರ್ವ ಕಲಾಸೇವೆಯನ್ನು ಗಮನಿಸಿ ಪ್ರಶಸ್ತಿ ಪತ್ರವನ್ನು ಕೊಟ್ಟು ಗೌರವಿಸಿದೆ. ಹಾಗೆಯೇ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯು ಕೂಡ ಸಾಲಿಯವರ ಕಲಾಸಾಧನೆ ಹಾಗೂ ಸೇವೆಯನ್ನು ಗಮನಿಸಿ ಪ್ರಶಸ್ತಿಯನ್ನು ಕೊಡಮಾಡಿದೆ. ಹೀಗೆ ಸಾಲಿಯವರಿಗೆ ಹಲವಾರು, ಪುರಸ್ಕಾರ, ಗೌರವ, ಸನ್ಮಾನಗಳು ನಾಡಿನಾದ್ಯಂತವೂ ಸಂದಿವೆ.

ಹೀಗೆ ಸಾಲಿಯವರು ಹಲವಾರು ಕ್ಷೇತ್ರಗಳಲ್ಲಿ ಅವಿಶ್ರಾಂತವಾಗಿ ದುಡಿದು, ತಮ್ಮ ನಿಷ್ಠೆ ಹಾಗೂ ದುಡಿಮೆಯಿಂದಲೇ ಆಯಾ ಕ್ಷೇತ್ರದಲ್ಲಿ ವಿಶಿಷ್ಟ ವ್ಯಕ್ತಿಯಾಗಿ ನಿಂತಿದ್ದಾರೆ. ಸಾಲಿಯವರ ಜೀವನ ಹಾಗೂ ಅವರ ವ್ಯಕ್ತಿತ್ವದ ಅಭಿವ್ಯಕ್ತಿಯಾದ ಕಲೆಯಲ್ಲಿ ಅಂತರವು ಕಂಡು ಬರುವುದಿಲ್ಲ. ಬದಲಾಗಿ ಒಂದು ಬಗೆಯ ಸಾಮರಸ್ಯ ಅದರಲ್ಲಿ ಸಾಧ್ಯವಾಗಿದೆ. ಅಂತೆಯೇ ಅವರ ಕಲಾಕೃತಿಗಳಲ್ಲಿ ಧಾರ್ಮಿಕ ದೃಷ್ಟಿ, ವಿಶೇಷವಾಗಿ ಶರಣ ಸಂಪ್ರದಾಯದ ಮತ್ತು

ತಾವು ಜೀವನದಲ್ಲಿ ಅಳವಡಿಸಿಕೊಂಡು ಬಂದ ತತ್ವಗಳ ಪ್ರಭಾವವನ್ನು ಕಾಣಬಹುದು. ಸಾಲಿಯವರ ಕಲಾಕೃತಿಗಳಲ್ಲಿ ಸಂಯೋಜನೆ, ನಿರ್ವಹಣೆ ಹಾಗೂ ತಾಂತ್ರಿಕ ದೃಷ್ಟಿಯಿಂದ ವಿಶೇಷತೆಗಳು ಕಂಡು ಬರದಿರಬಹುದು. ಆದರೆ ವಸ್ತುವಿನ ಆಯ್ಕೆ, ಮಾಧ್ಯಮದ ನಿರ್ವಹಣೆ, ವಸ್ತುವಿನ ಉದ್ದೇಶಕ್ಕನುಗುಣವಾದ ವರ್ಣ ಸಂಯೋಜನೆ, ರೇಖಾಂಕನ ಮುಂತಾದ ಪ್ರಮುಖ ಅಂಶಗಳು ಗಮನಾರ್ಹ.

ಮೇಲ್ನೋಟಕ್ಕೆ ಸಾಲಿಯವರ ಇಡಿಯಾದ ವ್ಯಕ್ತಿತ್ವ ಹಲವಾರು ವೈರುಧ್ಯಗಳ ಸಮಾವೇಶದಂತೆ ಕಂಡು ಬರುವುದು ಸಹಜವಾಗಿದೆ. ಆದರೆ ಈ ವೈರುಧ್ಯಗಳ ನಡುವೆಯೂ ಸಾಮರಸ್ಯವನ್ನು ಕಂಡುಕೊಂಡುದು ಅವರ ಹಿರಿಮೆಯಾಗಿದೆ. ಸಾಲಿಯವರ ವಿಶಿಷ್ಟ ವ್ಯಕ್ತಿತ್ವ ಹಾಗೂ ಅವರು ಅನೇಕ ಕ್ಷೇತ್ರಗಳಲ್ಲಿ ಪಡೆದ ಅನುಭವಗಳ ಲಾಭವನ್ನು ಕಲಾಕ್ಷೇತ್ರವು ಪಡೆಯುವುಂತಾಗಿದೆ ಎನ್ನಬಹುದು.

Chairman's Words


The Karnataka Lalita Kala Academy has been publishing a series of important publications, to which the booklets introducing the artists of Karnataka belong. The booklets, even though smaller, introduce aptly, each artist's life, development and his contribution to the field of art.

Shri Somashekhar Sali who belongs to the group of artists from J.J. School of Arts, Mumbai, has served the Academy on a grand scale as the Chairman of the Academy, apart from making significant individual contribution to the field of art as an artists. The Academy hopes that the booklet will introduce Shri Sali in a befitting manner to other artists, the students of art and the lover of arts.

At the request of the Academy Dr. B.K. Hiremath, the famous writer has written the booklet and Prof. Shridhar Rao has translated it into English in a lucid manner. Mr. Basavaraj Musavalgi, a member of the Academy has designed the bountiful layout of the booklet and Dr. H. Chandrashekhar, another member of the Academy has corrected the proofs and looked after the printing work. The Academy offers its grateful thanks to all of them.

The Karnataka Lalita Kala Academy has been making special contributions to world of Arts. These booklets form an important part of such contributions of the Academy. Therefore I hope such booklets will be useful to both artists and lovers of art.

Prof. V.G. Andani
Chairman.



Tall and slim person with a loose jubba, a shawl over the shoulder, an immaculate white dhoti appearing unfolded just then - all pure Khadi. To brighten these, an unhurried walk, with folded hands, and a smile, gentle speech with all he met on the street; a personality which would create various images - perhaps a seasoned politician, flourishing merchant, a social worker, leader, literateur, musician, painter. Quite naturally one would feel that all these facets cannot exist in one

person; only one of the manifold facets was real and genuine and the rest were figments of the observer's imagination. A closer observation would dispel all doubts convincing him that Sri Sali is a multifaceted personality. He has served in all these fields and gained vast and rich life-experiences.

The reason for the extra-ordinary personality of Sri Somashekhar is the fact that he was born and brought up in a highly prosperous and rich family. This family which originally belonged to Salimath, at one time, played a significant role in the teaching and spreading of knowledge. They had great interest in the progressive outlook along with the tradition of morality and piety which they had developed before. They held the temporal and the spiritual aspects as equally important in life, and were engaged in business and industry. It is no exaggeration to say that this was a family in

which there was the threefold confluence of Dharma, Art and Industry.

Somashekhar Sali's grand-father Rudrayya performed *thrikala pooja* (worshipping three times a day) with great devotion and followed the path of the Sharanas (selfless service). His maternal grand-father Jangina Murugayya was a noble soul, a great lover of Kannada. He fought for the unification of Karnataka and established the Karnataka Chamber of Commerce. He was a highly respected leader in Bombay Karnataka. Sali's father Magundayya's talent in identifying the quality and evaluation of cotton and the large scale cotton business he carried on for foreign companies made him famous as a 'cotton king'. Such a special family and social environment was the background in which Somashekhar's multifacted personality grew and developed.

Somashekhar was born on 7th November, 1922 at Chikkalgundi near Bagalkot which was his mother's native place. He grew up in an environment which had no lack of culture and wealth. His elders encouraged him in his inclinations and interests. There were many factors which caused the development of his artistic taste. His elder brother who died prematurely, used to paint nature paintings in water colour for the Illustrated Weekly of India and other magazines. Similarly, his uncle Sharanayya used to paint with pencil and powder colours. Somashekhar Sali would watch these paintings with great concentration and used to imitate them.

Sali's interest in paintings grew as a result of the encouragement given by the High School drawing teacher Sri H.N. Biradar and Sri A.V. Shastri, the English teacher. The decoration of the



ವೀರವಿರಾಗಿಣಿ ಅಕ್ಕಅಕ್ಕಮಹಾದೇವಿ - ತೈಲ ವರ್ಣ
Veera Viragini Akkamahadevi - Oil Colour



ಕಲಾರಾಧನೆ - ಜಲವರ್ಣ
Kalaradhane - Water Colour



ವೀರವಿರಾಗಿಣಿ ಅಕ್ಕಮಹಾದೇವಿ - ಜಲವರ್ಣ

Veera Viragini Akkamahadevi - Water colour




ರೂಪದರ್ಶಿ - ತೈಲವರ್ಣ

Model - Oil Colour



ಚರಖಾ - ಜಲವರ್ಣ

Charkha - Water Colour



ಭಾವಚಿತ್ರ - ತೈಲವರ್ಣ
Portrait - Oil Colour




ಭಾವಚಿತ್ರ - ಪೆನ್ಸಿಲ್ ಸ್ಕೆಚ್

Portrait - Pencil Sketch



ಮಹಿಳೆ - ತೈಲ ವರ್ಣ ಚಿತ್ರ
Lady - Oil Colour



ನಗ್ನರೂಪದರ್ಶಿ - ಪೆನ್ಸಿಲ್ ಸ್ಕೆಚ್
Nude model - Pencil Sketch




ಭಾವಚಿತ್ರ - ಪೆನ್ಸಿಲ್ ಸ್ಕೆಚ್

Portrait - Pencil Sketch



ನಗ್ನರೂಪದರ್ಶಿ - ಪೆನ್ಸಿಲ್ ಸ್ಕೆಚ್
Nude model - Pencil Sketch




ನರ್ತಕಿ - ಪೆನ್ಸಿಲ್ ಸ್ಕೆಚ್

Dancer - Pencil Sketch



ರೂಪದರ್ಶಿ - ಪೆನ್ಸಿಲ್ ಸ್ಕೆಚ್

Model - Pencil Sketch



ವೀರವಿರಾಗಿಣಿ ಅಕ್ಕಮಹಾದೇವಿ - ತೈಲ ವರ್ಣ ಚಿತ್ರ

Veera Viragini Akkamahadevi - Oil Colour



ನಗ್ನರೂಪದರ್ಶಿ - ಪೆನ್ಸಿಲ್ ಸ್ಕೆಚ್
Nude model - Pencil Sketch



ಶ್ರೀ ಬಂಥನಾಳ ಸ್ವಾಮೀಜಿಯವರ ಭಾವಚಿತ್ರ - ಪೆನ್ಸಿಲ್ ಸ್ಕೆಚ್

Portrait Shri. Banthanal Swamiji - Pencil Sketch

school manuscript magazine and the paintings of Bhodisatva Padma Pani, the shilabalikas of Belur, the stone chariot of Hampi, and other paintings indicated Sali's artistic genius. The reputed historian Sir Jadunath Sircar who visited the school recognised and praised Sali's artistic talent. All these occasions helped the development of Sri Sali as an artist.

He completed his matriculation in 1941. But the routine mechanical reading and study did not interest him. He had a great desire to take up art education in Sir J.J. School of Arts, Bombay or at Shantiniketan. Just at that time, the storm of the second world war broke out. It was felt that going to these cities was dangerous when people from those cities were migrating to safer places. Therefore, Sri Sali's enthusiasm faded. He joined the Lingaraj College Belgaum and studied general education. Even there it was his artistic interests

which made him popular. His development continued as he participated in art competitions and won many prizes. Dr. Shivaram Karanth who was the chief guest at one of the exhibitions, recognised the artistic talent hidden in him and gave a timely advice to him to change his course of study from general to art education. Sri Sali dreamt of joining art schools in Bombay and Calcutta. Just then, the *CHALE JAO* movement was started and Sri Sali had to give up the idea of studying in such places.

Again, in 1944, Sri Sali tried to resume his art education and joined the school of art started by the renowned artist Sri D.V. Halbhavi in 1938 at Dharward. Under his guidance, he studied art for two years. He shifted to Bombay and joined the famous art school Nutan Kala Mandir, headed by the famous KALAGURU Sri G.K. Dhandavathi. math. He then joined the Sir J.J. School of Arts to

study for a diploma in painting. The guidance of Sri Ahivase, the Head of the Department of Indian Painting impressed Sri Sali very greatly. Influenced by western art tradition Sri Sali was closely following it. Sri Ahivase gave an indigenous turn to his style of painting. Sri Sali was deeply influenced by the famous Kalacharya Sri Adurkar and Sri Palsikar in the composition of his portraits. But the climate of Bombay did not suit him. He fell ill constantly. As a result, he had to give up his study and return home.

Later Sri Sali's art study continued under the guidance of the famous artist Sri Minajigi whose personality and artistic achievement impressed him very much. He became a close disciple of Sri Minajigi. In 1950 he was able to obtain the diploma in painting from the Sir J.J. School of Arts Bombay.

As soon as he completed his art education in Bombay he got an opportunity of working in the film world there. But he had to engage himself in the family cotton business. Yet the lure of the world of art continued to beckon him to it. On a suggestion from Sri Minajigi he joined the Vijaya Mahantesh Lalithakala College, Hubli as a lecturer. He served there for two years. Meanwhile Sri Minajigi who was deeply impressed by the sincerity and artistic talent of Sri Sali wanted to make him the Principal of the College and also desired to send him abroad for higher studies in art. Just at that time, Sri Sali's father fell ill and became totally incapable to look after the business and the family affairs. As the eldest son in the family, Sri Sali Somashekhar had to give up his art education and engage himself in the family business. He inherited the skill and expertise in identifying and valuing cotton, from his father. He settled down in his

business and flourished well and earned a good reputation and also wealth. Yet, the original love and devotion for art kept obsessing his mind. Though he could not involve himself in art activities continuously and arrange art exhibitions, he tried to keep himself in touch with artistic activities keeping his creative tendencies alive. As a result, many of his sketches and paintings drawn then reached the collections of institutions and art lovers.

In the compositions of Sri Sali, whether they are pencil sketches, water or oil colour paintings, we can find the stamp of his distinctive personality. He is an artist of the Renaissance or the Romantic School of Art. His life and his art have been shaped in a special social background. On one side, there was the rule of the British empire and the slavish mentality of finding fulfillment in life in following their life and thought as much as possible, on the other side, there was the awakening that we were

losing the glory of the Indian art tradition and culture and that we should retain and rejuvenate the rich Indian cultural heritage. No field was away from these forces. That was the period in which the field of painting was also passing through a crisis of transition.

By the latter half of the nineteenth century, arts schools were already started in Bombay, Madras and Calcutta. Instruction in art by the Victorian art teachers had already been started in them. Imperfect and unenlightened publicity showing no proper understanding of the Indian tradition of art was spreading. This created contempt and scorn for the indigenous tradition. At the same time, Indian and foreign experts were making concerted efforts to enlighten the world about the fundamentals, the philosophical background and the grandeur of the Indian art tradition. Thus Sri Somashekhar was shaping his

artistic life during this critical and distinctive period of transition. It was his good fortune that he had the privilege of getting the guidance and inspiration of stalwarts in art like Ahivase, Minajigi, Adurkar, Palsikar, Dandavathi Math and Halbhavi. This contributed greatly to the development of his art and his life.

Looking at the total harvest of his artistic work, we can see his deep interest in almost all types of compositions which an active artist should have. Yet we recognise his special interest in portrait painting and composition. He has used the various media like water and oil colour in his works. All his paintings draw our attention from the point of view of subject and presentation.

Sri Sali's compositions gain significance from the subjects chosen. The influence of the environment in which he grew can be seen in the

choice of subjects. The religious atmosphere of his family inspired him to choose mythological subjects, the events in the life of *sharanas* and the religious celebrations. Even in his student days, he participated in the freedom struggle and swadeshi movement and was influenced by Gandhian thoughts. This led him to choose subjects like gramodyoga, life of skilled labourers, and the national leaders for portraits. 'Kalaradhane', `Girija Kalyana', `Veera Viragini Akkamahadevi', `Charaka', `Chennabasava Jananotsava', `Ganeshotsava', portraits of Gandhi, Nehru, Vallabha Bhai Patel and other leaders, great humanitarians like Abraham Lincoln, are all very significant works of art of Sri Sali.

Before acquainting ourselves with Sri Sali's painting we should consider his pencil sketches as a discipline in art education. Sketches are the basic

elements of art education. The special endeavours made in it, determine an artist's attainment. From this point of view, Sri Sali's nude studies deserve special notice. In these creations one has to give attention to the structure of the various parts of the body in creating a human shape, especially to the general and the individual details. Careful attention to the integral relationships of the purity of the lines, the conceptions of the cubics, shading and the proportional coordination is needed. Sri Sali's the nude, the draped and the portraits of great personalities are remarkable. His pencil sketches of Belur Shilabalikes are superb creations reflecting the purities of lines, conceptions of dimensions and attention to minute details.

Among his oil paintings, portaints and life paintings deserve our attention. The sitting/ standing posture of the model, the picture of the

muscular contours and curves of the various parts of the body, the complexion of the skin, the colour tone, all of which result from the light and shades, the concept of dimensions they give, the brightness of the eyes - all these factors bring life to the portraits. The portraits of a halfnude youth, of the bearded old man, of Gandhi and of a lady are all excellent portraits.

His composition draws special attention. One of them is the "Kalaradhane" painted in water colours. In this work, he has used the Bengali wash method, in which after washing the first coat of paint, a lighter shade is used.

This painting projects the idea that all artists absorbed in painting, sculpture and poetry are indirectly engaged in the worship of the Goddess of Art. At the break of day, this Goddess of Art dazzles us with the brilliance of the sunrise and

incarnates herself in the firmament of the sky. The atmosphere of the charming dawn, enveloped in a veil of mist is beautifully depicted in the painting. Bathed in this golden atmosphere, the enraptured and inspired artists are emotionally absorbed in the creation of a painting, a sculpture or a poem. This painting produces an ecstatic image of the flowing grace and compassion of the goddess of art as a gift to the artists for the dedication of their talents. This picture produces an unusual emotional experience of the worship of Art that is endlessly celebrated as a daily offering in this world. Sri Sali's skill in softening the bright colours is indeed remarkable.

GIRIJA KALYANA is another fascinating oil painting with a mythological subject. It depicts the grandeur of the wedding ceremony of Shiva and Girija in the benign presence of Giriraja, the sages, the gods and the goddesses. Girija and Shiva are

in the centre of the picture, resplendent as the bride and the bridegroom. On one side is Vishnu with Laxmi and the other side is Bramha with Saraswathi. The columns of the banana stems and the decorative wreathes of flowers and leaves adorn the wedding mantapa with the panchakalasha in front of the couple. An old sage recites Holi scriptures. The Shiva Ganas orchestrate the celestial musical instruments. Nandi, Shiva's vehicle can also be seen. This painting reminds the Indian mural paintings. It shows a balanced harmony of the bright and the soft colours, and also a blend of the splendor and the serenity creating an unusual effect. The abundance of the blue and the green colours suggests an image of the celestial Himalayan abode of Giriraja.

Sri Sali, influenced by the lives of the *Shivasharanas*, produced many paintings depicting their life and events. Among them the

pictures of Veera Viragini (The valiant ascetic) Akkamahadevi seeking Channamallikarjuna stand out as great works. It appears as if the painter has picturised the *Shivasharane's* vachana seeking her Lord. There are three paintings (Two in water colour and one in oil colour) on this subject. The oil painting has been done on the western realistic style. The water colour paintings have followed the Indian tradition of art. Yearning to see Channamallikarjuna, wandering naked (Digambare) in the forest, Akkamahadevi eagerly asks the hills, the trees, the creepers, the birds and the beasts, "Have you seen my Channamalikarjuna?" This is depicted in two paintings. In the other work, the naked *Shivasharane* is led by *Karastala linga,* (that is, God in the form of *Ishtalinga)* is oblivious of the world around her. These paintings have very effectively brought out Akkamahadevi's resolution, anxiety and yearning of the mind.

Being an artist himself and a link in the country's art tradition Sri Sali has worked hard for the development of drawing and painting. He has served as a member of the Karnataka State Lalitkala Academy. His service as the Chairman of the Lalit Kala Academy from 1984-87 is of great importance. Annual Art Exhibitions, Artists, and Art students' camps, financial aid to solo and group exhibitions, stipends, awards for artists, publication of books on the life and - achievements of artists these were the programmes which he very ably conducted for the welfare of artists and development of art. During his period, he served with great dedication for the blossoming of art even neglecting his business affairs.

It was during the period of Sri Sali's Chairmanship that the mobile Art Exhibition vehicle came into existence. This helped to take the paintings of artists of state fame and national

fame from the Academy's collection to the corners of the state thus creating an artistic atmosphere in the whole state. Taking it to big and small cities and towns, where art seminars *kalamelas* and cultural conferences were held, it served the purpose of spreading the love of art everywhere. It is a matter of pride that this mobile van is the third in the whole country and the first in the whole of South India. That he could get the facility of such a van for the Academy, stands as a proof of the competence of Sri Sali. Further, another proof of his efficiency is that he got a well equipped graphic workshop for the academy which is of great help to the artists.

The World Kannada Conference conducted during Sri Sali's chairmanship shows his qualities of competence and determination. On this occasion the Academy arranged art exhibitions,

artists' camps, seminars, sets of paintings by senior artists and volumes of paintings. He thus gave a new shape and dimension to the contemporary art activities. In 1986 at the SAARC conference he conducted an artists' camp under the guidance of the reputed artist Sri K.K. Hebbar. This is one of the important programmes he conducted during that period. In all these activities we can see Sri Sali's concern for the art tradition of our land and his competence in bringing it to the notice of the Government and the people.

Sri Sali has been an active member of the Bangalore Chitrakala Parishat and as its Vice-President he played a major role in tis development. He was also a member of the Basaveshwar Vidya Vardhak Sangha, Bagalkote, the illustrious Education Society of North Karnataka and served as its Vice-President for many years.

Sri Sali is himself a poet, with an enlightened taste for language and literature. Many of his poems were published in magazines. He is a powerful speaker and could keep a crowd captive by his power of oratory. He had learnt music and is a good singer.

Sri Sali actively participated in the freedom struggle and the *Chale Jao* Movement. He was influenced by the Gandhian thoughts and had imbibed nationalism, the love of Khadi, self-sanitation and cleanliness. At his marriage, his inlaws wanted to give him expensive clothes but he accepted only Khadi clothes. He has remained as a Gandhian and a Khadidhari.

Many political changes have taken place at the State and the National level but Sri Sali never defected or changed his loyalties. He is associated with many state and national leaders but in his

principles and dedication he has remained unshaken. He has been a member of many social and cultural organisations, held many positions and served selflessly. He is a highly respected politician and a social worker. He is a multi-faceted personality and as such he has been honoured by many social and religious organisations in recognition of his services.

The All India Fine Art and Crafts Society, Delhi recognised his substantial service in the field of art and honoured him. The All India Languages and Literature Conference Bangalore honoured him with the title "Bharath Bhasha Bhushan" in recognition of his service to art and literature. In the Karnataka Rashtra Bhasha Parishad held under the auspices of Sri Kolada Matha he was honoured with a title "Chitra Kala Ratna". Srishaila Surya Simhasanadheeshwara Jagadguru Ja Cha Nee

bestowed upon him, the title "Lalitkala Sudhakar". The famous Vijay Lalit Kala Society of Gadag honoured him for his distinction in the field of art. He has also been honoured by the Karnataka State Lalit Kala Academy for his artistic attainment. So Sri Sali has received various honours and titles.

He has gained a special place for himself in every field in which he served. No distinction between his life and his art, which is the expression of his personality, can be found. On the other hand, a close harmony can been seen in them. We can find in his artistic work a concept of Dharma, especially, the Sharana tradition and unwavering commitment for the principles imbibed in his life. It may be true that no special features in the composition, organisation, presentation, or technique can been seen in his works. But the choice of the subject, the organisation of the medium, the combination of colours based on the

demands of the subjects, the linear control-such important factors are remarkable

On a superficial view Sri Sali's total personality may appear to be a combination of contradictory elements. But his real genius lies in the fact that he was able to harmonise these contradictions. His multi-faceted personality, the experience he gained in various fields have helped him to enrich the field of art.